ಒಪ್ಪತಕ್ಕದ್ದಲ್ಲ. ಇವರ ರಾಜ್ಯಭಾರ ಯಾವಾಗಲೂ ಮನ್ನಣೆಯನ್ನು ಪಡೆಯುತಕ್ಕದಲ್ಲ. ಅದಕ್ಕೋಸ್ಕರ ಬಾಗಿ ಇನ್ನು ಮುಂದಾದರೂ ಕೂಡ ಅಂಥಾದ್ದನ್ನು ತರಬಾರದು. ಈ ದಾನ ಪದ್ಧತಿಯನ್ನು ಇಲ್ಲಿಗೆ ನಿಲ್ಲಿಸಿಬಿಡಬೇಕು. ಈ ಜೀವದಾನಪದ್ಧತಿಯನ್ನು ಬಿಟ್ಟು ಇನ್ನುಮುಂದಾದರೂ ಕೆಲವು ಗಳನ್ನು ಸಮನ್ವಯಮಾಡುವದಕ್ಕೆ ಪ್ರಯತ್ನಮಾಡಿ, ಎಲ್ಲ ಕಾನೂನುಗಳನ್ನು ಸಮನ್ವಯಮಾಡಿ ದೇಶದಲ್ಲಿ ಜನರಿಗೆ ತರುವಬಕ್ಕೆ ಎಲ್ಲವಿಧವಾದ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri Kadidal MANJAPPA.—Sir, my Hon'ble friend Sri Muckannappa threw a challenge to the Congress Party the other day that they would not be in a position to introduce the Land Reforms Bill during this session. We have met his challenge. Similarly, we are meeting this challenge also.

With regard to his contention that the Government is at fault in not introducing a uniform legislation with regard to this subject, I beg to submit that the process is going on since the last two years. In the field of taxation uniform legislation has been completed during the session itself. The question of enacting uniform law with regard to local authorities has been considered and the Select Committee is engaged within the task of scrutinising the Bill. Similarly, we have introduced a uniform Bill with regard to co-operative societies. So, let not the Hon'ble Members try to creat an impression in the public mind that the Government is silent over this subject. They are very active. Every day we are dealing with the same matter. We will try to introduce a Bill for enacting uniform legislation with regard to this subject as early as possible, most probably during the session.

Sri G. VENKATAI GOWDA (Palaiyam).—You were pleased to say hat the Bill is almost ready. If that is so, why should you not have introduced it and got it passed in this session itself? You could have avoided the time and energy that is wasted in seeking these various Acts.

Sri Kadidal MANJAPPA.—We a almost ready with the Bill, but the extension to House must have time.

Mr. DEPUTY SPEAKER.—The question is:

"That the Mysore Rent Control Laws Continuance Bill, 1958, as passed by the Legislative Council, be taken into consideration."

The motion was adopted.

Mr. DEPUTY SPEAKER.—The question is:

"That the Title, the Preamble, clauses 1, 2, 3, 4, 5 and 6 stand part of the Bill".

The motion was adopted.

The Title, the Preamble, clauses 1, 2, 3, 4, 5 and 6 were added to the Bill.

Motion to pass.

Sri Kadidal MANJAPPA.—Sir, I beg to move:

"That the Mysore Rent Control Laws Continuance Bill, 1958, as passed by the Legislative Council, be passed."

Mr. DEPUTY SPEAKER.—The question is:

"That the Mysore Rent Control Laws Continuance Bill, 1958, as passed by the Legislative Council, be passed"

The motion was adopted.

MYSORE (PERSONAL AND MISCELLANEOUS) INAMS ABOLITION (AMENDMENT) BILL, 1958

Motion to consider.

Sri Kadidal MANJAPPA (Minister for Revenue).—Sir, I move:

"That the Mysore (Personal and Miscellaneous) Inams Abolition (Amendment) Bill, 1958, be taken into consideration."

Mr. DEPUTY SPEAKER.—Motion moved:

"That the Mysore (Personal and Miscellaneous) Inams Abolition (Amendment) Bill, 1958, be taken into consideration."

Sri Kadidal MANJAPPA.—Sir, this is also a simple and very useful measure. I am sure it will receive the wholehearted support of this House. Everybody in this House is anxious that inam villages should be taken over by Government as early as possible.

There are only a few clauses in the Bill. Clause 2 pertains to section 5 of the original Act. Section 5 of the original Act deals with the question of registering a permanent tenant as an occupant of the inam land. According to the existing section 5 a permanent tenant who has to be registered as an occupant of the land is required to pay 20 times the land revenue before he is registered as an occupant. There are certain permanent tenants and though they are described so they should be classed as kadim tenants because they are paying only the actual assessment payable in respect of that land. It is not correct to levy any upset price on these permanent tenants because we are not conferring upon them any new right. Therefore with a view to exempt such permanent tenants from the payment of upset price we have brought forward this amendment.

Clause 3 pertains to section 10A. It is simply an amendment. It provides for the entries to be made in the Record of Rights.

The important clause is Clause 5. This clause pertains to section 19 of the original Act. Section 19 deals with the payment of interim compensation. It reads like this:

> "Where the amount of compensation is not paid to an inamdar within a period of six months from the date of vesting, the Government shall, subject to such restrictions and conditions as to security, repayment or otherwise as may be prescribed direct the payment to each such inamdar of interim compensation which shall be equal to one-tenth of the estimated amount of compensation."

According to this section as soon as an inam land vests in the Government interim compensation has to be paid within a period of six months from the date of vesting. Such compensation should not exceed one-tenth of the estimated amount of compensation. That means until the whole amount of compensation is settled, the inamdar is entitled to receive only one-tenth of the compensation. There are a number of unsurveyed, unsettled inam villages in the State. Government have been receiving complaints from almost every village harrowing tales of inamdar unlawfully evicting the tenant and forcibly occupying the lands. Such tales we are receiving every day. Therefore Government is anxious to take over all the inam villages at least by the end of March 1959, possibly we will be taking them over earlier. As I submitted many of these inam villages are unsurveyed and unsettled and it may not be fair to pay only one-tenth of the estimated compensation and ask the inamdar to wait till the final compensation is settled or determined. Therefore we seek to amend the clause providing for the payment of one-fifth of the estimated interim compensation instead of one-tenth.

The other clauses are of a very minor nature.

With these observations I commend this measure for the consideration of this august House.

*Sri G. VENKATAI GOWDA (Palaiyam).—Mr. Speaker, so far as the proviso that is sought to be incorporated under section 5 is concerned, I feel it goes a long way to help permanent tenants who are entitled to be registered as occupants under section 117 of the Land Revenue Code or who have paid rent equal to the land revenue. Some of the persons who are entitled to be registered as permanent tenants are those who have paid rent equal to the land revenue but I am doubtful how far it would not touch the finances of the State. Because, under original section 5(2) the question of paying premium by the tenants to the Government is retained. When so many persons who would come within the definition of that proviso are not paying it, in such a case when the Government has taken the responsibility of paying to the inamdar, does it not amount that some money is to be paid out of the State's finances? If that is so, does it not

involve financial implication? Hence it requires financial memorandum in that regard. Why I am submitting that is, according to section 5 some persons who take the benefit are not required to pay premium as contemplated under sub-section (2) of section 5. If that is the case, when especially the Government has taken the responsibility of paying the quantum of compensation to inamdars it remains unaltered. Therefore there is the financial implication involved. To that extent it has to be met out of the finances of the State. Therefore financial memorandum ought to have been given, I do not know whether the Hon'ble Minister has caught my point.

Sri Kadidal MANJAPPA.—I have caught your point. We have considered this aspect before introducing this Bill.

Sri G. VENKATAI GOWDA.—According to the proviso the premium has to be paid by Government. That is an additional responsibility and so there is financial implication.

10-30 A.M.

So far as the amendment to section 19 is concerned, I think it is an unwarranted piece of amendment which is sought to be incorporated, for the simple reason that before compensation has been determined, the Government has no right to charge interest on the estimated amount of compensation. My submission is, if you want to charge interest on any particular sum of money, it should have been ascertained before the interest is sought to be charged. Now the compensation is only in the nature of an estimated compensation. Before you finally determine, how can you ask any tenant to pay interest on the estimated compensation? Also it is against the principles of the rule of Law. Unless the amount is ascertained or determined, no question of charging interest for an estimated sum comes up. Therefore, I submit that this amendment to section 19 in respect of interest has got to be deleted. That is one point. Secondly you have enhanced the quantum of interim compensation from one-tenth to one-fifth, and I cannot understand how it can be justified. Before compensation is fixed finally, you have made provision in section 19 which reads "where the amount of compensation is not paid to an inamdar within a period of six months from the date of vesting....." I want to know how this compensation is paid unless it is determined. Within six months you will not be able to determine the compensation. Where the amount of compensation is not paid, how can a person pay compensation without that being finally determined within six months?

Sri Kadidal MANJAPPA.—Will you kindly go through the original clause?

Sri G. VENKATAI GOWDA.—I am reading from the original clause. You are trying to enhance the compensation from one-tenth to one-fifth. What was the necessity for providing the interim compensation to inamdars in case of default? What is the reason for that?

My second point is, you are seeking to charge interest on estimated compensation. It is not consistent with the principles of any law. Unless a sum is determined, you are not entitled to charge any interest. Unless the principal becomes due, how can you charge interest? Unless you determine compensation, it is not due. What right have you got to charge interest? The clause regarding the question of interest has got to be deleted. With these observations I support so far as the proviso to section 5 is concerned and oppose as far as the amendment in respect of interest is concerned.

ಶ್ರೀ ಜಿ. ಎಕ್. ಪುಟ್ಟಣ್ಣ (ತುಮಕೂರು).—ಈ ಮಸೂದೆಯನ್ನು ತಂದಿರತಕ್ಕ ಮಾನ್ಯ ಮಂತ್ರಿಗಳಿಗೆ ಪೊದಲು ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ನುಮಾರು ಒಂದು ಒಂದೂವರೆ ತಿಂಗಳು ರಾಗಾಯ್ತು, ಜೋಡಿ ಗ್ರಾಮಗಳಲ್ಲಿರುವ ರೈತರಿಗೆಷ್ಟು ತೊಂದರೆಯಿದೆಯೆಂಬುದನ್ನು ನಾನು ಅರಿಕೆಮಾಡಿ ಕೊಂಡೆ. ನಾನೂ ಒಬ್ಬ ಜೋಡಿದೀದಾರ. ಮೈನೂರು ನರ್ಕಾರದವರು ಜೋಡಿ ರೈತರನ್ನು ಮುಲತಾಯಿ ಮಕ್ಕಳಹಾಗೆ ಕಾಣುತ್ತಿದ್ದಾರೆ, ಅವರಿಗೇನೂ ರಕ್ಷಣೆಯಿಲ್ಲ ಎಂದು ಬಹಳ ದಿವಸಗಳಿಂದ ಹೇಳುತ್ತಿದ್ದೆವು. 1954ರಲ್ಲಿ ಒಂದು ಆಕ್ಟ್ ತಂದರು. ಜೋಡಿದಾರರು ಜೋಡಿಗ್ರಾಮದ ರೈತರಮೇಲೆ ಕ್ರಿಮಿನಲ್ ಮತ್ತು ಸಿವಿಲ್ ಕೇಸುಗಳನ್ನುಹಾಕಿ ರೈತರ ಮನೆಗಳನೆಲ್ಲಾ ನಾಶವಾಡುತ್ತಿದ್ದರು. ಆಗ ಆ ಆಕ್ಟನ್ನು ತಂದರು. 1957ನೆಯ ಇನವಿಯವರೆಗೆ ಅದನ್ನು ಹೇಗೆ ಇಂಪ್ಲಿಮೆಂಟ್ ಮಾಡಬೇಕೆಂದು ಸರಿಯಾಗಿ ರೂಲ್ಸ್ ಮಾಡಿರಲಿಲ್ಲ. ಜೋಡಿ ರೈತರು ಕೇವಲ ಬಡತನದಲ್ಲಿರು

(ಶ್ರೀ ಜಿ. ಎಸ್. ಪುಟ್ಟಣ್ಣ)

ಪಡರು. ಅವರಿಗೆ ವಿದ್ಯೆಯಿಲ್ಲ, ಬುದ್ಧಿಯಿಲ್ಲ ಅಧಿಕಾರಿಗಳು ಮತ್ತು ಜೋಡಿದಾರರು ಒಂದಾಗಿ ಜೋಡಿ ರೈತರಮೇಲೆ ಕ್ರಿಮಿನಲ್ ಕೇಸು, ಸಿವಿಲ್ ಕೇಸು ಹಾಕಿ ಅವರ ಮನೆ ಹಾಳುಮಾಡಿದರು. ಆ ಆಕ್ಟ್ ಪ್ರಕಾರ "No civil court shall take cognizance of suits" ಎಂದಿತ್ತು. ಆ ಬಗ್ಗೆ ಸಿವಿಲ್ ಕೋರ್ಟುಗಳಿಗೆ ಹಾಕಿ ಮಂತ್ರಿಗಳಿಗೆ ಬರೆದು ಪರ್ಸನಲ್ಲಾಗಿ ಹೇಳಿದರೂ ಏನೂ ಆಗಲಿಲ್ಲ, ಹೈ ಕೋರ್ಟ್ ರಿಜಿಸ್ಟ್ರಾರನ್ನು ಕೇಳಿಬೇಕೆಂದು ಹೇಳಿದರು. ಅದೇನಾಯಿತೋ ಗೊತ್ತಾಗಲಿಲ್ಲ. ಈಗ ಈ ಮಸೂದೆಯನ್ನು ತಂದಿರುವುದನ್ನು ನೋಡಿ ಸಂತೋಷವಾಯಿತು. ಅಂತೂ ರೈತರು ಮುಳುಗಿಹೋಗಿದ್ದಾರೆ. ಹಿಂದೆ, ರಾಮಚಂದ್ರರಾಯರು ಎಂದು ಕಾಣುತ್ತದೆ— ಜೋಡಿ ವ್ಯವಸ್ಥೆಮೆಂಟ್ ಸರ್ಕಾರದವರು ತೆಗೆದು ಕೊಳ್ಳುವುದಕ್ಕೆ ಐದು ವರ್ಷವಾಗುತ್ತದೆಂದು ಹೇಳಿದ್ದರು. ಈಗ ಈ ಮಸೂದೆ ಬಂದಿರುವುದರಿಂದ ಖಂಡಿತ ಸ್ವಾಗತ ಮಾಡಬೇಕಾಗಿದೆ.

ಇನ್ನು ಕೆಲವು ವಿಚಾರ ಮಾತ್ರ ಅವಗಾಹನೆಗೆ ತರುತ್ತೇನೆ. ಐದನೆಯ ಸೆಕ್ಷನ್ ತಿದ್ದುಪಡಿಯಲ್ಲಿ "Provided that where a permanent tenant entitled to be registered as an occupant of land under sub-section (1)" ಎಂದಿದೆ. ರಿಜಿಸ್ಟರ್ ಆಗಬೇಕಾದರೆ ಲೋಕಲ್ ಆಫೀಸರುಗಳು ಬಂದು "ನಿನ್ನಹತ್ತಿರ ರಸೀತಿ ಇದೆಯೆ, ಪಟ್ಟಿ ಇದೆಯೆ" ಎಂದು ಕೇಳಿದರೆ ಇರುವುದಿಲ್ಲ. ಕಾರಣ ಜೋಡಿದಾರರಿಗೆ ಕೊಟ್ಟಿರುವುದಿಲ್ಲ. 14 ಮತ್ತು 15 ನೆಯ ನಂಬರು ರೆಕ್ಕ ರ್ಯಾಂಡ್ ರೆವೆನ್ಯೂ ರೂಲ್ ಆರರ ಪ್ರಕಾರ ತಾಲ್ಲೂಕಾಫೀಸಿಗೆ ಕೊಡಬೇಕೆಂದು ಕಾನೂನಿದೆ. ಒಬ್ಬ ಜೋಡಿದಾರರೂ ಕೂಡ ಜೋಡಿಗ್ರಾಮ ಹುಟ್ಟಿದಲಾಗಾಯ್ತು ಸರ್ಕಾರಕ್ಕೆ ಈ ರೆಕ್ಕ ಕೊಟ್ಟಿಲ್ಲ. ರೈತರ ಹೆಸರು, ಐದೀಂಟೆನೆಂಟ್ ಹೆಸರು ಅನೇಕ ಗ್ರಾಮಗಳಲ್ಲಿ ಗೊತ್ತಾಗುವುದಿಲ್ಲ. ಜೋಡಿದಾರರು ಬುದ್ಧಿವಂತರು. ಅವರು ರೈತರನ್ನು ಕರೆಸಿ "ನಿಮಗೆ ಪಟ್ಟೆಯನ್ನು ಆಕ್ಟ್ ಪ್ರಕಾರ ಕೊಡುತ್ತೇವೆ, ಹಳೆಯ ರಸೀತಿ ತನ್ನಿ" ಎಂದು ಹೇಳಿ ರಸೀತಿ ತೆಗೆದುಕೊಂಡು ಪಟ್ಟೆ ಕೊಡುವುದಿಲ್ಲ. ಸರ್ಕಾರಕ್ಕೆ ಈ ವಿಚಾರದಲ್ಲಿ ಅನೇಕ ಅರ್ಜಿಗಳು ಬಂದಿವೆ. ಹಳೆಯ ರಸೀತಿಯನ್ನು ಕಿತ್ತುಕೊಂಡು ಹೊಸ ಪಟ್ಟೆ ಕೊಟ್ಟಿಲ್ಲ. ಇದರಿಂದ ರೈತರಿಗೆ ತ್ರಿಶಂಕು ಸ್ವರ್ಗವಾಗಿದೆ. ಅರ್ಜಿಬಂದರೆ ಸರ್ಕಾರದವರು ಕೆಳಗಿನ ಅಧಿಕಾರಿಗಳಿಗೆ ಕಳುಹಿಸುತ್ತಾರೆ. ಆದರೆ ಡೆಪ್ಯುಟಿ ಕಮಿಷನರಾಗಲಿ ಅಥವಾ ಅಸಿಸ್ಟೆಂಟ್ ಕಮಿಷನರಾಗಲಿ ವಿಚಾರ ಮಾಡುವುದಿಲ್ಲ. ಏನಾದರೂ ಕೇಳಿದರೆ "shut up, ಬಾಯಿಗೆ ಬಂದ ಹಾಗೆ ಮಾಡಿಕೊಳ್ಳಿ" ಎಂದು ಹೆದರಿಸುತ್ತಾರೆ. ಜೋಡಿದಾರರಿಗೆ ಈ ಅಫೀಸರುಗಳ ಬೆಂಬಲವಿದೆ. ಇದರಿಂದ ರೈತರು ಹಾಳಾಗುತ್ತಾರೆ. ಜಮೀನು ಬೇಕಿಲ್ಲದಿದ್ದರೆ ಬೇರೆಕಡೆಹೋಗಿ, ಜೋಡಿಗ್ರಾಮ ಬಿಡಿ ಎಂದು ಹೇಳುತ್ತಾರೆ. ರೈತರಿಗೆ ಆ ಶಕ್ತಿಯಿಲ್ಲ. ರ್ಯಾಂಡ್ ರೆವೆನ್ಯೂ ರೂಲ್ ಆರರ ಪ್ರಕಾರ 14—15 ನೆಯ ನಂಬರು ರೆಕ್ಕ ಕೊಡದಿದ್ದರೆ, the statement of the tenant or the cultivator must be taken as gospel truth ಎಂದಿರಬೇಕು. ರೈತರಿಗೆ ಒಳ್ಳೆಯದು ಮಾಡಬೇಕೆಂಬ ಮನಸಿನಿಂದ ಆಫೀಸರುಗಳು ಹಾಗೆ ಮಾಡದಿದ್ದರೆ ರೈತರ ಹಕ್ಕುಬಾಧ್ಯತೆಗಳನ್ನು ಹೇಗೆ ಗೊತ್ತುಮಾಡುವುದು?

ಹತ್ತನೆಯ ಸೆಕ್ಷನ್‌ನಲ್ಲಿ "Determination of claims" ಎಂದಿದೆ. ತುರುವೇಕೆರೆ ತಾಲ್ಲೂಕಿನಲ್ಲಿ ಅರಸಿನಕೆರೆ ಎಂಬ ಗ್ರಾಮವಿದೆ. ಅಲ್ಲಿ ಸರ್ವೆ ಆಯಿತು. ರೈತರ ಹೆಸರು ಬರೆದಿರುವ 14—15ನೆಯ ನಂಬರು ರೆಕ್ಕ ಕೊಟ್ಟಿಲ್ಲವೆ ಎಂದು ಕೇಳಿದರೆ ಕೊಟ್ಟಿಲ್ಲವೆಂದು ಹೇಳಿದರು.

Insertion of new section 10A.

"1 A. Entries to be made in the record of rights—

(1) After the determination of claims under section 10, the Deputy Commissioner shall send the prescribed particulars of the decision to the officer maintaining the record of rights under the Mysore Land Record of Rights Act, 1958.

(2) On receipt of the particulars under sub-section (1), and notwithstanding anything contained in the Mysore Land Record of Rights Act, 1958, the officer concerned shall enter such particular in the registers."

ಈ ರೀತಿ ಹತ್ತನೆಯ ಸೆಕ್ಷನ್‌ನಲ್ಲಿ ತಿದ್ದುಪಡಿಯಾಗಬೇಕೆಂದು ಇದೆ. ಆದರೆ ರೈತನು ಎಷ್ಟು ದಿವಸ ಸಾಗುವಳಿ ಮಾಡುತ್ತಿದ್ದಾನೆ ಎಂಬುದನ್ನು ಕಾಗದ ಪತ್ರದಲ್ಲಿ ಬರೆಯುವುದಿಲ್ಲ. ಏನು ಬೇಕೋ ಅದನ್ನು ಬದಲಾವಣೆಮಾಡಿ ಬರೆದುಬಿಡುತ್ತಾನೆ. ಅನೇಕ ಸಾರಿ complete change ಮಾಡಿದ್ದು ಸಹ ಕಂಡು ಬಂದಿದೆ. ಇಂಥಾದ್ದಕ್ಕೆ ರೈತರು ವಿರೋಧ ಮಾಡುವುದಿಲ್ಲ. ಇದು ನನಗೆ ಚೆನ್ನಾಗಿ ಗೊತ್ತಿದೆ. ಯಾಕೆಂದರೆ ನಾನೂ ಒಬ್ಬ ಜೋಡಿದಾರನಾಗಿದ್ದೇನೆ. ಆದರೆ ಇತರ ಜೋಡಿದಾರರ ಹಾಗೆ ನಾನು ರೈತರಿಗೆ ಅನ್ಯಾಯ ಮಾಡಿಲ್ಲ. ರೈತನ ಸ್ಥಿತಿಗತಿಗಳನ್ನು ಸರಕಾರ ರಕ್ಷಣೆ ಮಾಡದೇ ಇದ್ದರೆ ಎಷ್ಟು ಅನ್ಯಾಯ ರೈತನಿಗೆ ಆಗುತ್ತದೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ಜೋಡಿ ಗ್ರಾಮಗಳನ್ನು ಹುಡುಕ್ಕೆ ಯಾವಾಗಲೋ ಕೊಟ್ಟಿದ್ದಾರೆ. ಇಂಥ ಜೋಡಿ ಗ್ರಾಮಗಳನ್ನು ಹೇಗೆ ಸಂಪಾದಿಸಿದ್ದಾರೆ ಎಂದರೆ ಒಂದು ಚುಟುಕ ನನ್ಮಕೂಚ್ಚ ಜೋಡಿದಾರರು ಜಮೀನು ಪಡೆದಿದ್ದಾರೆ ರೈತರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ರೈತರ ಕಣ್ಣಲ್ಲಿ ನೀರು ಬರುತ್ತದೆ. ನಾನು 1923ನೆಯ ಇಸವಿಯ ದ ಕಾನೂನು ಮಾಡಬೇಕೆಂದು ಹೇಳುತ್ತಾ ಬಂದಿರತಕ್ಕದ್ದನ್ನು ಇಂದು 1958ನೆಯ ಇಸವಿಯ ನವೆಂಬರ್ 29ನೆಯ ತಾರೀಖಿಗೆ ಈ ಕಾನೂನನ್ನು ಸರಕಾರದವರು ತಂದಿದ್ದಾರೆ. ದೇವರು ಒಳ್ಳೆ ಮನಸ್ಸು ಕೊಟ್ಟಿದ್ದರಿಂದ ಈಗ ಈ ಕಾನೂನನ್ನು ತಂದಿದ್ದಾರೆ. ಇನ್ನು ಹತ್ತನೆಯ ಸೆಕ್ಷನ್‌ನಲ್ಲಿ ಇರುವಹಾಗೆ ಎಂಟ್ರಿಸ್ ಮಾಡುವುದರಲ್ಲಿ ಲೋಕಲ್ ಆಫೀಸರುಗಳು ಸರಿಯಾಗಿ ಮಾಡುವುದಿಲ್ಲ. ಯಾರಾದರೂ ಬಂದು ಕಂಪ್ಲೇಂಟ್ ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. Enquiry Officer ಸ್ಥಳದಲ್ಲೇ enquiry ಮಾಡಬೇಕು ಮತ್ತು ವಿವರಗಳನ್ನು ಅಲ್ಲಿಯೇ ಬರೆಯಬೇಕು. ಹಾಗೆ ಮಾಡುವುದಕ್ಕೆ ಒತ್ತಾಯವಿರ

ಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ಅನ್ಯಾಯ ವಾಗುತ್ತದೆ. ಯಾರಾದರೂ ಪುಢಾರಿ ಬಂದು ಹೇಳಿದರೆ ಮಾತ್ರ ಅಧಿಕಾರಿಗಳು ತಕ್ಷಣ ಕ್ರಮ ತೆಗೆದು ಕೊಳ್ಳುತ್ತಾರೆ. ಹೀಗೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕಾದುದು ಅಗತ್ಯ.

ಇನ್ನು 18ನೆಯ ಸೆಕ್ಷನ್ನಿನ ತಿದ್ದುಪಡಿ ಈ ರೀತಿ ಯಾಗಿದೆ. "Provided that the amount payable under the bonds issued under this clause may be repaid in such number of instalments not exceeding ten as may be prescribed." ಬಾಂಡ್ಸ್ ಏತಕ್ಕೋಸ್ಕರ ಕೊಡುತ್ತೀರಿ? ಕಾಂಪೆನ್‌ಸೇಷನ್ ಏತಕ್ಕೋಸ್ಕರ ಕೊಡಬೇಕು? ಜೋಡಿದಾರರಿಗೆ ಕಾಂಪೇನ್‌ಸೇಷನ್ ಕೊಡುವುದು ಹೇಗೆ ಬರುತ್ತದೆ? ಇದಕ್ಕೆ ಕಾರಣ ವೇನು? ಅವರಿಗೆ ಏನಾದರೂ ಖಾಲಿ ಗ್ರಾಮ ಕೊಟ್ಟಿದ್ದಾರೆಯೇ? ಆದುದರಿಂದ ಇದನ್ನು define ಮಾಡ ಬೇಕು. ಜೋಡಿದಾರರು ನ್ಯಾಯದಿಂದ, ಧರ್ಮದಿಂದ ಜಮೀನು ಸುಧಾರಣೆ ಮಾಡಿದ್ದರೆ ಕೊಡಬಹುದಾ ಗಿತ್ತು. ನಿಜವಾಗಿಯೂ ಜೋಡಿದಾರರಿಗೆ ಕಾಂಪೆನ್ ಸೇಷನ್ ಕೊಡುವುದು ಸರಿಯಾಗಿಲ್ಲ. ಇನ್ನು ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಪರಿಹಾರ ಕೊಡ ತಕ್ಕದ್ದು ಎಂಬುದನ್ನು ಗೊತ್ತುಮಾಡಬೇಕು. ರೋಕಲ್ ಆಫೀಸರು ಅಂಥ ಸ್ಥಳಕ್ಕೆ ಹೋಗಿ ಅಲ್ಲಿ ಕ್ಯಾಂಪುಹಾಕಿಕೊಂಡು ವಿಚಾರಣೆ ಮಾಡಬೇಕು. The concerned officer must go to the village and camp there till he decides this issue. You must give instructions like this. ಇನ್ನು ಕಾಂಪೆನ್‌ಸೇಷನ್ ಯಾವ ಆಧಾರದ ಮೇಲೆ ಕೊಡುತ್ತೀರಿ? Pay compensation in cash and not in bonds. ಅವರು ಬಾಂಡ್ ತೆಗೆದುಕೊಂಡು ಏನು ಮಾಡಬೇಕು? ಆದುದರಿಂದ ಪರಿಹಾರವನ್ನು cash ರೂಪವಾಗಿ ಕೊಟ್ಟುಬಿಡಬೇಕು. ದಯವಿಟ್ಟು ಸರಿಯಾದ ರೂಲ್ಸ್ ಮಾಡಿ ಲೋಕಲ್ ಅಫೀಸರರಿಗೆ ಇನ್‌ಸ್ಟ್ರಕ್ಷನ್ಸ್ ಕೊಡಬೇಕು. ಜೋಡೀದಾರರಿಗೂ ತೊಂದರೆಯಾಗಬಾರದು, ರೈತರಿಗೂ ತೊಂದರೆಯಾಗಬಾರದು, ಮತ್ತು ಸರಕಾರಕ್ಕೂ ತೊಂದರೆಯಾಗಬಾರದು. ಸರ್ವೆ ಮಾಡುವಾಗ ರೈತನು ಏನು ಹೇಳುತ್ತಾನೆಯೋ ಅದಕ್ಕೆ ಸಂಪೂರ್ಣ ಬೆಲೆ ಬರಬೇಕು. ಇಲ್ಲದಿದರೆ ಅನ್ಯಾಯವಾಗುತ್ತದೆ. ದಯವಿಟ್ಟು ಯಾವತಾರೀಖಿಗೆ ಈ ಕಾನೂನು ಜಾರಿಗೆ ಬರುತ್ತದೆ ಎಂಬುದನ್ನು ತಿಳಿಸಬೇಕು. ತತ್‌ಕ್ಷಣ ಈ ಕಾನೂನನ್ನು ಜಾರಿಯಲ್ಲಿ ತರಬೇಕು. ಒಂದೊಂದು ಸಾರಿ ಇಂಥ ಕಾನೂನು ಜಾರಿಯಲ್ಲಿ ಬರಲು ಎಷ್ಟೋ ದಿವಸಗಳು ಆಗಬಹುದು.

Sri Kadidal MANJAPPA.—No, no. It requires the assent of the President. Government is anxious that this Bill becomes law as early as possible and the Government is anxious to take all inam villages as early as possible.

ಶ್ರೀ ಜಿ. ಎನ್. ಪುಟ್ಟಣ್ಣ.—As early as possible ಎಂದು ಹೇಳಿದರೂ ಈ ಕಾನೂನು ಜಾರಿ ಯಲ್ಲಿ ಬರುವುದಕ್ಕೆ ಮುಂಚೆ bring up, put up, cut up, shut up ಎಂದು ಎಷ್ಟೋ ಕಾಲಹರಣ ವಾಗುತ್ತದೆ.

Sri Kadidal MANJAPPA.—There is no question of bringing up or putting up.

Sri G. N. PUTTANNA.—So it will be taken up imediately.

Sri Kadidal MANJAPPA.—Yes.

ಶ್ರೀ ಜಿ. ಎನ್. ಪುಟ್ಟಣ್ಣ.—ರೈತನು ಉದ್ಧಾರವಾಗ ಬೇಕು. ಜೋಡಿದಾರರಿಗೆ ಅನ್ಯಾಯ ಮಾಡಬಾರದು. ಈ ರೀತಿ ಮಾಡುವುದಕ್ಕೆ ಸರಿಯಾದ instructions local officerಗೆ ಕೊಡಿ, ಅರೀತಿ ರೂಲ್ಸ್ ಮಾಡಬೇಕು. ಅದಲ್ಲದೆ ಜೋಡಿ ಗ್ರಾಮದಲ್ಲಿರತಕ್ಕ ಕೆರೆಗಳನ್ನು ಸರ ಕಾರದ ಮೇಲ್ವಿಚಾರಣೆಗೆ ತೆಗೆದುಕೊಂಡು ರಿಪೇರಿ ಮಾಡಿಸಬೇಕು. ಇಂಥ ಜೋಡಿ ಗ್ರಾಮಗಳು ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟಿವೆ. ಕೆರೆಗಳ ರಿಪೇರಿ ಮಾಡಿಸಬೇಕು ಎಂದು ಒಂದು ಸರ್ಕ್ಯುಲರ್ ಹೊರಡಿಸಬೇಕು.

Sri Kadidal MANJAPPA.—Inam villages should be taken over whether surveyed or not. Inam abolition Act is likely to come into force immediately and Government is anxious to take over all villages. Therefore, all the tanks must be takenup for repairs immediately.

ಶ್ರೀ ಜಿ. ಎನ್. ಪುಟ್ಟಣ್ಣ.—ಈ ಬಿಲ್ಲನ್ನು ಅನು ಮೋದಿಸುವುದಕ್ಕೆ ನನಗೆ ಬಹಳ ಸಂತೋಷವಾಗು ತ್ತದೆ.

ಶ್ರೀ ಎನ್. ಆರ್. ರಾಮಯ್ಯ (ಹೊಸಕೋಟೆ).—ಈ ಇನಾಂ ರದ್ದಿಯಾತಿ ತಿದ್ದುಪಡಿ ಮಸೂದೆಯನ್ನು ತಂದಿರುವುದು ನಿಜವಾಗಿಯೂ ಕೂಡ ನಮ್ಮ ಗೇಣೀದಾರರಿಗೆ ಒಂದು ವರಪ್ರಸಾದವೇ ಆಯಿತು ಎಂದು ನನಗೆ ಅನ್ನಿಸುತ್ತಿದೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ಮೂರರಲ್ಲಿ ಸುಮಾರು ಎರಡುಭಾಗ ಈ ಗೇಣಿದಾರರಿಗೆ ಸಂಬಂಧಪಟ್ಟ ಕೊಂದರೆಗಳು ಇತ್ತೀಚೆಗೆ ಆದರಲ್ಲೂ ಈ ಇನಾಂ ಜಮೀನುಗಳ ಅಳತೆ ಮಾಡುವಾಗ ವಿಪರೀತ ಕೊಂದರೆಯಾಗಿ ಮಂತ್ರಿಗಳಿಗೂಕೂಡ ಕಾಗದ ಬರೆದು ಖುದ್ದಾಗಿ ಇರತಕ್ಕ ವಿಚಾರವನ್ನು ಅವರ ಗಮನಕ್ಕೆ ತಂದುದಾಯಿತು. ಅವರಿಗೂ ಕೂಡ ಕೆಲವು ದಿವಸ ಅದು ಒಂದು ದೊಡ್ಡ ಸಮಸ್ಯೆಯಾಗಿ ಕಂಡುಬಂತು. ಅಂಥಾದ್ದರಲ್ಲಿ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದು ಇವತ್ತಿನದಿವಸ ಇರತಕ್ಕ ನ್ಯೂನತೆಯನ್ನು ಸರಿ ಪಡಿಸುತ್ತಾ ಇರುವುದು ನಿಜವಾಗಿಯೂ ಸ್ವಾಗತಾರ್ಹ ವಾದುದು ಮತ್ತು ಅವರು ವಂದನಾರ್ಹರು. ಇದ ರಲ್ಲಿ ಎಲ್ಲಾ ಸರಿಪಡಿಸಿಬಿಟ್ಟಿದ್ದೇವೆ ಎಂದು ಹೇಳದರೂ ಕೂಡ ನನಗೆ ಇನ್ನುಸ್ವಲ್ಪ ಅನುಮಾನ ಉಳಿದು ಕೊಂಡಿದೆ. ಹಿಂದೆ ಬೇಕಾದಷ್ಟು ಪ್ರಕಟಣೆಗಳನ್ನು ಕೊಟ್ಟಿದ್ದೀರಿ. ಎಲ್ಲಾ ವಿಚಾರಗಳೂ ಜೋಡಿದಾರರಿಗೆ ಗೊತ್ತಿದೆ. ಇದು ಹೇಗಿದೆ ಎಂದರೆ ಮೊದಲು ಇಂಗ್ಲೀಷ್‌ನವರನ್ನು ಓಡಿಸುವುದಕ್ಕೆ ಒಂದು ರಂಗಹೂಡಿ ದ್ದಾಯಿತು, ಎರಡನೆಯದಾಗಿ ರಾಜರನ್ನು ಓಡಿಸಿ ದ್ದಾಯಿತು. ಈಗ ಮೂರನೆಯವರಾದ ಈ ಉಪ ರಾಜರುಗಳು ಅವರೆಲ್ಲರಿಗಿಂತ ಶಕ್ತಿವಂತರಾಗಿದ್ದಾರೆ. ಗೇಣೀದಾರರು ಅವರ ಕೈಕೆಳಗೆ ಇನ್ನು ಎಷ್ಟುದಿವಸ ಇರಬೇಕೋ ಏನೋ! ಮೊದಲು ರಾಜನು ಒಬ್ಬರು ಇದ್ದರು. ಈಗ ಉಪರಾಜರು ಎಲ್ಲಾ ಕಡೆಗೂ ಹಂಚಿಕೆ ಯಾಗಿದ್ದಾರೆ. ಪ್ರತಿಯೊಂದು ಕಛೇರಿಲ್ಲೂ ಇದು ಒಂದು ದೊಡ್ಡ ಸಮಸ್ಯೆಯಾಗಿ ಅವರು ಎಲ್ಲರು ತ್ತಾರೆನ್ನುವುದೇ ಗೊತ್ತಾಗುವುದಿಲ್ಲ. ಅವರು ಬೇಕಾ ದಷ್ಟು ಸಿಬ್ಬಂದಿ ಇಟ್ಟುಕೊಂಡು ದೊಡ್ಡದಾಗಿ ವ್ಯವ ಹಾರ ನಡೆಸುತ್ತಾ ಇರುತ್ತಾರೆ. ಈ ಸೆಕ್ರೆಟೇರಿಯಟ್

(ಶ್ರೀ ಎಸ್. ಆರ್. ರಾಮಯ್ಯ)

ನಲ್ಲೂ ಕೆಲಸಮಾಡುತ್ತಾ ಇದ್ದಾರೆ. ಎಲ್ಲ ರಾಜಕೀಯ ಪಕ್ಷಗಳಲ್ಲೂ ಇರುತ್ತಾರೆ. ಅವರು ಎಲ್ಲಿ ಇರುತ್ತಾರೆಂಬುದನ್ನು ಪತ್ತೆಹಚ್ಚುವುದಕ್ಕಾಗುವುದಿಲ್ಲ.

ಶ್ರೀ ಡಿದಾಳ್ ಮಂಜಪ್ಪ.—ನಮ್ಮ ಸೆಕ್ರೆಟೇರಿಯಟ್‌ನಲ್ಲಿ ಅವರ ಕೈವಾಡ ನಡೆಯುವುದಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಗೇಣೀದಾರರಿಗೆ ಎಂತಹ ಕಷ್ಟಪರಿಸ್ಥಿತಿ ಇದೆಯೆಂದರೆ ತಹಸೀಲ್‌ದಾರರ ಹತ್ತಿರ ಹೋದರೆ ಅವರೇ ನೇರವಾಗಿ ಪರಿಶೀಲನೆ ಮಾಡಲು ಕಷ್ಟವಾಗುತ್ತವೆಂದು ಹೇಳಿ ಅವರು ಅಷ್ಟು ಮುತುವರ್ಜಿ ವಹಿಸಿ ಕೆಲಸಮಾಡಲು ಅವಕಾಶ ಕೊಡುತ್ತಿಲ್ಲ. ಮೊದಲು ತಾಲ್ಲೂಕು ಆಫೀಸುಗಳಲ್ಲಿ ರಾಯರುಗಳ ಸುಳಿವು ಇರಲಿಲ್ಲ ಮತ್ತು ಅವಕಾಶವಿರಲಿಲ್ಲ. ಈಗ ಈ ಶಾಸನ ಬಂದಮೇಲೆ ಈ ರಾಯರುಗಳು ಬಹಳ ಹೆಚ್ಚಾಗಿ ತಾಲ್ಲೂಕು ಕಛೇರಿಗಳಿಗೆ ಓಡಾಡುತ್ತಾ ಇದ್ದಾರೆ. ಇವರ ಓಡಾಟ ಬಹಳ ವಿಪರೀತಕ್ಕೆ ಇಟ್ಟುಕೊಂಡಿದೆ. ಈ ಸಮಸ್ಯೆ ಅಷ್ಟು ಸುಲಭವಾಗಿಲ್ಲ. ಅನೇಕಕಡೆ ದಾಖಲೆಗಳೇ ಸಿಕ್ಕುವುದಿಲ್ಲ. ಜೋಡಿದಾರರಿಗೆ ಯಾವತರಹ ಬೇಕೋ ಆ ತರಹ ಶ್ಯಾನುಭೋಗರು ರಿಕಾರ್ಡ್‌ಬರೆದು ಇಟ್ಟುಕೊಂಡಿದ್ದಾರೆ. ಮರಗಳು ಅನೇಕ ಇವೆ. ಯಾವಕಡೆ ಯಾವ ಮರ ಇದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲ. ಯಾರಾದರೂ ಬಂದು ಇಂಥಾ ಕಡೆ ಜೋಡಿಗ್ರಾಮದಲ್ಲಿ ಮರ ಹೊಡೆಯುತ್ತಾ ಇದ್ದಾರೆ ಅದನ್ನು ತಡೆಗಟ್ಟಬೇಕೆಂದು ಹೇಳಿದರೆ ದಾಖಲೆ ಕೊಡಿ ಎಂದು ಕೇಳುತ್ತಾರೆ. ಗೇಣಿದಾರರ ಕೈಯಲ್ಲಿ ಹಣ ಇಲ್ಲ. ರಾಯರುಗಳ ಹತ್ತಿರ ಹೋಗಬೇಕು. ಇಷ್ಟೆಲ್ಲಾ ಮಾಡಬೇಕಾದರೆ ಎಷ್ಟು ತೊಡಕು ಇವೆ ಎಂಬುದನ್ನು ಸರ್ಕಾರದವರು ತೀವ್ರವಾಗಿ ಗಮನಿಸಬೇಕು. ಕಾನೂನುಮಾಡಿದ್ದೇವೆ, ಬೇಕಾದಷ್ಟು ರಕ್ಷಣೆ ಕೊಡುತ್ತಾ ಇದ್ದೇವೆ ಎಂದರೆ ಸಾಲದು. ಈ ವಿಚಾರದಲ್ಲಿ ತೀವ್ರ ಕ್ರಮ ತೆಗೆದುಕೊಂಡು ಅಧಿಕಾರಿಗಳಿಗೆ ಸೂಚನೆಕೊಟ್ಟು ಗೇಣೀದಾರರ ತೊಂದರೆಗಳನ್ನು ಅದಷ್ಟು ಜಾಗ್ರತೆ ನಿವಾರಣೆಮಾಡಲು ಪ್ರಯತ್ನಮಾಡಬೇಕು. ನನ್ನ ಕ್ಷೇತ್ರದಲ್ಲಿರುವ ಜೋಡಿಗ್ರಾಮವಾದ ರಾಮಗೋವಿಂದಪುರದಲ್ಲಿ 3,000 ರೂಪಾಯಿಗಳಷ್ಟು ಬೆಲೆಬಾಳತಕ್ಕ ಆಲದ ಮರವನ್ನು ಕಡಿದು ಹಾಕಲು ಅನುಮತಿ ಕೊಟ್ಟಿದ್ದಾರೆಂದು ಹೇಳುತ್ತಾರೆ. ಅದಕ್ಕೆ ದಾಖಲೆ ಕೊಡಿ ಎಂದು ಕೇಳುತ್ತಾರೆ. ಯಾರಿಂದ ದಾಖಲೆ ತರುವುದು? ಹಿಂದೆ ಮರ ಹಾಕಿಸಿದವರು ಸತ್ತುಹೋಗಿದ್ದಾರೆ. ಹೀಗಿರುವಾಗ ಸರ್ಕಾರದವರು ದಿಟ್ಟತನದಿಂದ ವರ್ತಿಸಿ ಈ ಸಮಸ್ಯೆ ಬಗೆಹರಿಸಬೇಕು. ಈ ಉಪಯೋಜನ ಪ್ರಭಾವಕ್ಕೆ ಒಳಗಾಗದೇ ಈ ಶಾಸನವನ್ನು ಜಾರಿಗೆ ತರಲು ಪ್ರಯತ್ನಪಡಬೇಕೆಂದು ಹೇಳುತ್ತೇನೆ.

ಮೊನ್ನೆತಾನೆ ಆಹಾರದ ವಿಚಾರದಲ್ಲಿ ಬಹುಮಟ್ಟಿಗೆ ಚರ್ಚೆ ಆಯಿತು. ಜೋಡಿಗ್ರಾಮಗಳ ಪರಿಸ್ಥಿತಿ ನೋಡಿದರೆ ಇವತ್ತಿನದಿನ ಗೇಣೀದಾರರಿಗೆ ಇರತಕ್ಕ ಸಂಕಷ್ಟದಿಂದ ಆಹಾರ ಬೆಳೆಯನ್ನು ಹೆಚ್ಚಾಗಿ ಬೆಳೆಯಲಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದನ್ನು ತೀವ್ರ ಗಮನಿಸಬೇಕು. ರೆಕಾರ್ಡ್ ಆಫ್ ರೈಟ್ಸ್‌ನಲ್ಲಿರುವ ಹಕ್ಕು ಭಾಧ್ಯತೆಗಳು ಸರಿಯಾಗಿ ದೊರೆಯದಿದ್ದರೆ ಅವನು ಯಾವರೀತಿ ಬೆಳೆ ಮಾಡುತ್ತಾನೆ? ಕೇವಲ, ಆಕ್ಟ್ ಮಾಡುತ್ತೇವೆ, ಜಾರಿಗೆ ತರುತ್ತೇವೆ ಎಂದರೆ ಪ್ರಯೋಜನವಿಲ್ಲ. ಇವತ್ತಿನವರ ಯಾವಕಡೆ ಧಕ್ಕೆ ಬರುತ್ತಾ ಇದೆಯೆಂಬುದನ್ನು ನೋಡಿ ಅಧಿಕಾರಿಗಳು ಕೆಲಸ ಮಾಡುವಂತೆ ಆಗಬೇಕು. ಅಧಿಕಾರಿಗಳಿಗೆ ಬೆಂಬಲ ಕೊಟ್ಟು, ತಾಕೀತುಮಾಡಿ ಈ ಕಾನೂನನ್ನು ಅವರ ಕೈಯಲ್ಲಿ ಕೊಟ್ಟು ಕೆಲಸಮಾಡಿ ಎಂದು ಹೇಳಬೇಕು. ಅನೇಕವೇಳೆ ನನ್ನ ಗಮನಕ್ಕೆ ಬಂದಿದೆ. ಅಧಿಕಾರಿಗಳು ಈ ವಿಷಯದಲ್ಲಿ ಪ್ರವೇಶ ಮಾಡುತ್ತಾ ಇಲ್ಲ. ಅದೂ ಈ ಸೆಕ್ರೆಟೇರಿಯಟ್‌ನಲ್ಲೇ ಮಾಡುತ್ತಾ ಇಲ್ಲ ಎಂದು ಹೇಳುತ್ತಾರೆ. ಅದೂ ಇಲ್ಲೇ ಇದ್ದೂ ತಮ್ಮ ಗಮನಕ್ಕೆ ಬಂದಿಲ್ಲವೋ ಏನೋ ಗೊತ್ತಿಲ್ಲ.

ಶ್ರೀ ಡಿದಾಳ್ ಮಂಜಪ್ಪ.—ಸೆಕ್ರೆಟೇರಿಯಟ್‌ನಲ್ಲಿ ಇನಾಂದಾರರ ಕೈವಾಡ ನಡೆಯುವುದಿಲ್ಲ ಎಂದು ಆಗಲೇ ಹೇಳಿದೆ.

ಶ್ರೀ ಎಸ್. ಆರ್. ರಾಮಯ್ಯ.—ಸಂತೋಷ, ರೆಕಾರ್ಡ್ ಆಫ್ ರೈಟ್ಸ್‌ನ ಕೊರತೆ ಇದೆ. ಅನೇಕರು ಹಣ ಕೊಟ್ಟಿದ್ದರೂ ಕೂಡ ಜಾಗ್ರತೆ ಅಳತೆ ಆಗುತ್ತಿಲ್ಲ. ಅದು ಏನು ಕಾರಣವೋ ಏನೋ! ನಾವು ಕಾಗದ ಬರೆದು ಒತ್ತಾಯಮಾಡಿ ಹಿಂಸೆಪಡಿಸಿದರೆ ರೆಕಾರ್ಡ್ ಆಫ್ ರೈಟ್ಸ್ ಜಾಗ್ರತೆ ಬರುತ್ತದೆಯೇ ವಿನಾ ತನಷ್ಟಕ್ಕೆತಾನೇ ಜಾಗ್ರತೆ ಆಗುತ್ತಿಲ್ಲ. ವರ್ಷಗಟ್ಟಲೆ ತೆಗೆದುಕೊಳ್ಳುತ್ತಾ ಇದೆ. ಇದನ್ನು ತಪ್ಪಿಸಬೇಕು. ಒಂದು ನಿರ್ದಿಷ್ಟವಾದ ಫೀಪಣಿ ಹೊರಡಿಸಿ ಅವರವರ ಹಕ್ಕನ್ನು ಸಿದ್ಧಪಡಿಸಬೇಕು. ಈ ರೀತಿ ಮಾಡಿದ್ದಾದರೆ ಹೆಚ್ಚು ಆಹಾರ ಬೆಳೆಯಲು ಅವಕಾಶವಾಗುತ್ತದೆ.

ಇನ್ನೊಂದು ವಿಷಯ. ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನವರು ಡಿಸ್ಟ್ರಿಕ್ಟ್ ಬ್ಯಾಂಕಿನವರಿಗೆ ಬಾಪಿ ತೋಡುವುದಕ್ಕೂ ಮತ್ತು ಜಮೀನಿನ ಅಭಿವೃದ್ಧಿಗೂ ಸಾಲ ಕೊಡುವುದಕ್ಕಾಗಿ ಹಣ ಒದಗಿಸುತ್ತಾ ಇದ್ದಾರೆ. ಇವತ್ತಿನ ದಿವಸ ಜೋಡಿ ಗ್ರಾಮಗಳಲ್ಲಿ ಇನ್ನೂ ಮಾನ್ಯತೆ ಬಂದಿಲ್ಲ ಎಂದು ಹೇಳಿ ಅವರು ಹಣ ಕೊಡುತ್ತಾ ಇಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 300 ಗ್ರಾಮಗಳಲ್ಲಿ ಈ ರೀತಿ ಪರಿಸ್ಥಿತಿ ಇದೆ. ಅವರಿಗೆ ಸಾಲದ ಸೌಲಭ್ಯ ಇಲ್ಲ.

11 A.M.

ಇಷ್ಟು ಜನ ಯಾವಾಗ ಸೌಲಭ್ಯ ಪಡೆಯಲಲ್ಲವೋ, ಅಷ್ಟು ಜನಕ್ಕೂ ತೊಂದರೆಯಾಗುತ್ತದೆ; ನಷ್ಟ ವಾಗುತ್ತದೆ. ತಾವು ಇವುಗಳನ್ನು ಗಮನಿಸಿ, ಜಾಗ್ರತೆ ಒಂದು ನಿರೂಪಣೆ ಕೊಟ್ಟು, ಹಣದ ಸೌಲಭ್ಯ ಮತ್ತು ಸರ್ಕಾರದ ಸೌಲಭ್ಯಗಳು ಬರುವುದಕ್ಕೆ ವ್ಯವಸ್ಥೆ ಮಾಡಬೇಕು. ಹೀಗೆ ಮಾಡಿದರೆ ನಮ್ಮ ದೇಶದ ಅಭಿವೃದ್ಧಿಗೆ ಒಂದು ದೊಡ್ಡ ಸಹಾಯ ಮಾಡಿದಂತಾಗುತ್ತದೆ ಎಂದು ಹೇಳಿ ನನ್ನ ಒಂದರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಈ ಇನಾಂ ಅಬಾಲಷ್ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತಾ, ಅದರಲ್ಲಿರುವ ಕೆಲವು ನ್ಯೂನತೆಗಳನ್ನು ಹೇಳಬೇಕಾಗಿ ಬರುತ್ತದೆ.

ಈ ವಿಷಯದಲ್ಲಿ ನಾವು ಕಾನೂನುಗಳ ಮೇಲೆ ಕಾನೂನುಗಳನ್ನು ಮಾಡುತ್ತಾ ಇದ್ದೇವೆ. ಆದರೆ ಕಾನೂನುಗಳು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿವೆ, ಅಥವಾ ಎಗ್ಸಿಕ್ಯುಟೀವ್ ಇವತ್ತಿನ ದಿವಸ ನಾವು ಕೊಟ್ಟಂಥ ಕಾನೂನನ್ನು ಎಷ್ಟು ಎಫೆಕ್ಟೀವ್ ಆಗಿ ಜಾರಿಗೆ ತಂದಿದ್ದಾರೆ ಎನ್ನುವ ವಿಷಯ ನಮ್ಮ ಮುಂದಿದೆ. ಈ ಎಗ್ಸಿಕ್ಯುಟೀವ್‌ನಲ್ಲಿ, ಪರ್ಮನೆಂಟ್ ಎಗ್ಸಿಕ್ಯುಟೀವ್ ಮತ್ತು ಟೆಂಪೊರರಿ ಎಗ್ಸಿಕ್ಯುಟೀವ್ ಎಂದು ಇದೆ. ಮಂತ್ರಿಮಂಡಲದವರು ಕೆಲವು ಆರ್ಡರ್‌ಗಳನ್ನು ಮಾಡಿದರೂ, ಆ ಆರ್ಡರುಗಳನ್ನು ಸಿವಿಲ್ ಸರ್ವೆಂಟ್ಸ್ ಎಷ್ಟರಮಟ್ಟಿಗೆ ಕಾರ್ಯಗತ ಮಾಡಿ

ದ್ದಾರೆ ಎನ್ನುವುದು ನನಗೆ ನಂಶಯಾಸ್ಪದವಾಗಿದೆ. ಕ್ಯಾಬಿನೆಟ್‌ನಲ್ಲಾದ ಕೆಲವು ಆರ್ಡರುಗಳನ್ನು ಪರ್ಮನೆಂಟ್ ಎಗ್ಸಿಕ್ಯುಟೀವ್ ತಾತ್ಕಾರ ಮನೋಭಾವದಿಂದ ಕಂಡ ನಿದರ್ಶನಗಳಿವೆ. ಪ್ರತಿಯೊಂದು ಡಿಸ್ಟ್ರಿಕ್ಟಿಗೋ ಅಥವಾ ಡಿವಿಜನ್ನಿಗೋ ಒಬ್ಬ ಇನಾಂ ಡೆಪ್ಯುಟಿ ಕಮಿಷನರ್ ಇದ್ದರೆ, ನಮ್ಮ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿಯೂ ಒಂದು ಕಮಿಷನರ್ ಆಫ್ ಇನಾಮ್ ಹುದ್ದೆ ಇದೆ. ಅಲ್ಲಿಗೆ ಬಂದಂಥ ಡೆಪ್ಯುಟಿ ಕಮೀಷನರು ಎಷ್ಟೆಷ್ಟು ಕಾಲ ದಯಿಪಿದ್ದಾರೆಂಬುದನ್ನು ನೋಡಬೇಕು. ಮೈಸೂರು ಡಿಸ್ಟ್ರಿಕ್ಟಿಗೆ ಹಾಕಿದವರ ಚರಿತ್ರೆ ನೋಡಿದರೆ, ಒಬ್ಬರು ಎರಡು ತಿಂಗಳು, ಇನ್ನೊಬ್ಬರು ಆರು ತಿಂಗಳು ಇದ್ದಾರೆ. ಕುರ್ಚಿಮೇಲೆ ಕುಳಿತುಕೊಂಡು, ಮನೆ ಮಠ ಮಾಡುವುದರಲ್ಲಿ ಹೊರಟು ಹೋಗುತ್ತಾರೆ. ಡೆಪ್ಯುಟಿ ಕಮಿಷನರುಗಳು ಇಷ್ಟು ಬೇಗ ಬದಲಾಯಿಸಿದರೆ, ಅವರು ಏನು ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯ? ಹೀಗಾಗಿ, ಇನಾಮುಗಳ ಅಬಾಲಿಷ್ ಹೋಗಿ, ಡೆಪ್ಯುಟಿ ಕಮಿಷನರ ಸ್ಥಾನಗಳ ಅಬಾಲಿಷ್ ಪ್ರಾರಂಭವಾಗಿದೆ. ಈ ಅಬಲಿಷ್‌ಗಳನ್ನು ನಿಲ್ಲಿಸಿ! ಅವರಿಗೆ ಎರಡು ಮೂರು ವರ್ಷವಾದರೂ ಕೆಲಸ ಮಾಡುವ ಅವಕಾಶ ಕಲ್ಪಿಸಿಕೊಡಬೇಕು. ಈ ಟ್ರಾನ್ಸ್‌ಫರುಗಳ ಅವಾಂತರದಿಂದ ಕೆಲಸವಾಗುತ್ತಾ ಇಲ್ಲ. ನುಮ್ಮನೆ ಕಾನೂನು ಮಾಡಿಬಿಟ್ಟರೆ ಏನು ಉಪಯೋಗ? ಈ ಮರ್ಗದ ಅವಾಂತರದಲ್ಲಿ ಕಾನೂನುಗಳು ಇನ್ ಎಫೆಕ್ಟೀವ್ ಆಗುತ್ತಿವೆ. ಈ ಕಾನೂನುಗಳಿಗೆ ಅಗೌರವ ತರದಂತೆ ಮಾಡಬೇಕು.

ಈ ಡೆಪ್ಯುಟಿ ಕಮಿಷನರ ಆಫೀಸಿಗೆ ಸೇರಿದ ಅಮಲ್ದಾರರು, ಸರ್ವೇಯರುಗಳು, ರೆವಿನ್ಯೂ ಇನ್ಸ್‌ಪೆಕ್ಟರುಗಳು, ಎಲ್ಲಿದ್ದಾರೋ, ಏನು ಮಾಡುತ್ತಾರೋ ನನಗೆ ಗೊತ್ತಿಲ್ಲ. ಎರಡು ವರ್ಷಗಳ ಹಿಂದೆ, ರಿಜಿಸ್ಟರ್ ಮಾಡಿಸಿ ಕೊಡುತ್ತೇವೆಂದು ರೈತರಿಂದ ಒಂದು ರೂಪಾಯಿ ಸ್ಟ್ಯಾಂಪು ತೆಗೆದುಕೊಂಡುಬಿಟ್ಟರು. ಸ್ಟ್ಯಾಂಪು ತೆಗೆದುಕೊಂಡು ಬಿಟ್ಟವೇಲೂ ಅವರ ಹೆಸರಿಗೆ ರಿಜಿಸ್ಟರ್ ಮಾಡದಿದ್ದಕ್ಕೆ ಕಾರಣವೇನು! ಮತ್ತೆ ಈ ಸರ್ವೆ ಸೆಟಲ್‌ಮೆಂಟ್ ಉದ್ಧಾರವೇಕೆ! ನಿಮಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ತೊಂದರೆ ಏನು? ಖಾಯಂ ಜೆನೆಂಟ್ಸ್ ಮಾಡುವುದಕ್ಕೆ ಏನು ಕಷ್ಟ! ಖಾತೆ ಅವರ ಹೆಸರಿನಲ್ಲಿ ಇದ್ದರೆ ಬಹಳ ಸುಲಭ. ಸರ್ಕಾರಿ ಅಧಿಕಾರಿಗಳು ಅದನ್ನು ನೋಡುತ್ತಾ ಇಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಆಫೀಸುಗಳ ತಪಾಸ್ ಮಾಡುವಾಗ ಅದನ್ನು ನೋಡಬೇಕು; ಕೆಲಸ ಏನಾಗಿದೆ ಎನ್ನುವುದನ್ನು ನೋಡಬೇಕು. ಈ ಆಫೀಸುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸರಿಯಾಗಿ ಕೆಲಸ ಮಾಡುವಂತೆ ಏರ್ಪಾಡು ಮಾಡಲು ಎಂದು ಇದನ್ನು ಸರ್ಕಾರದ ಗಮನಕ್ಕೆ ತರಲು ಇಷ್ಟ ಪಡುತ್ತೇನೆ.

ಈಗತಾನೆ ಶ್ರೀ ರಾಮಯ್ಯನವರು ಹೇಳಿದಂತೆ, ಖದೀಂ ಜೆನೆಂಟ್ ಆಗಿದ್ದು, ಸರ್ವೆ ಸೆಟಲ್‌ಮೆಂಟ್‌ನಲ್ಲಿ ಅತನ ಹೆಸರಿನಲ್ಲಿ ಖಾತೆ ಇದ್ದರೆ, ಅಂಥವನಿಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರಾಗಲಿ ಮತ್ತು ಇತರ ಫೈನಾನ್ಷಿಯಲ್ ಕ್ರೆಡಿಟ್ ಸೊಸೈಟಿಗಳವರಾಗಲಿ ಸಾಲ ಕೊಡುವುದರಲ್ಲಿ ತೊಂದರೆಯಾಗುವುದಿಲ್ಲ. ಸರ್ಕಾರ ಇದನ್ನು ಪರಿಶೀಲಿಸಬೇಕು. ರೀಸೆಂಟ್ ಆಗಿ, 1958-59ರಲ್ಲಿ ಸರ್ಕಾರ ಇನಾಂ ಗ್ರಾಮದಲ್ಲಿರತಕ್ಕವರಿಗೆ ಸಾಲ ಕೊಡಬೇಡಿ ಎಂದು ಮಾರ್ಟ್‌ಗೇಜ್ ಬ್ಯಾಂಕುಗಳಿಗೆ ಒಂದು ಆರ್ಡರ್ ಕಳುಹಿಸಿದ್ದಾರೆ. ಖಾತೆದಾರನಾಗಿದ್ದರೆ ಸಾಲ ಕೊಡುವುದಕ್ಕೆ ಏನು ತೊಂದರೆ! ಲೀಗಲ್ಲಾಗಿ ಯೋಚನೆ ಮಾಡಿ. ಇನಾಂ ಗ್ರಾಮದಲ್ಲ ಅವನಿಗೆ ಜಮೀನಿದ್ದರೆ ಕೊಡುವುದಿಲ್ಲ. ಬೇರೆ ಗ್ರಾಮಗಳಲ್ಲಿದ್ದರೆ, ಅವನಿಗೆ ಯಾರು ಕೊಡುತ್ತಾರೆ! ಈ ambiguous order ನಿಂದ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಆ ಆರ್ಡರನ್ನು ಅಮೆಂಡ್ ಮಾಡಬೇಕು. ಮತ್ತು ಈ ಅಮೆಂಡೆಡ್ ಆರ್ಡರನ್ನು ಮಾರ್ಟ್‌ಗೇಜ್ ಬ್ಯಾಂಕ್ ಮತ್ತು ಇತರ ಸೊಸೈಟಿಗಳಿಗೆ ಕಳುಹಿಸಬೇಕು. ಎಕ್. ಇ. ಎಸ್. ನಲ್ಲಿಯೂ ಲಕ್ಷಾಂತರ ರೂಪಾಯಿಗಳನ್ನು ರೈತರಿಗೆ ಕೊಡುತ್ತಾ ಇದ್ದೀರಿ. ಆದ್ದರಿಂದ ಈ ಆರ್ಡರನ್ನು ಎಲ್ಲಾ ಎಕ್.ಇ.ಎಸ್. ಬ್ಯಾಂಕುಗಳಿಗೂ ಕಳುಹಿಸಬೇಕು. ಅಂಥ ಸಮಯದಲ್ಲಿಯೂ ಕೂಡ ಎಲ್ಲಾ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಜಾಗ್ರತೆ ಆರ್ಡರನ್ನು ಅಮೆಂಡ್ ಮಾಡಿ ಕಳುಹಿಸಬೇಕು.

ಬಾಂಡುಗಳ ವಿಷಯದಲ್ಲಿ ಸ್ವಲ್ಪ ಹೇಳಿದ್ದಾರೆ. ಹೆಚ್ಚು ಕಡಮೆ ಸರ್ಕಾರ ಇನಾಂದಾರರಿಂದ ಸಾಲ ತೆಗೆದುಕೊಂಡಂತಾಗಿ, ಆ ಸಾಲಕ್ಕೆ ಇಂಟರೆಸ್ಟ್ ಕೊಟ್ಟಂತೆ ಆಗುತ್ತದೆ. ಅವರಿಗೆ ಇಂಟರೆಸ್ಟ್ ಯಾವ ರೂಪದಲ್ಲಿ ಕೊಡುತ್ತೀರಿ ಎನ್ನುವ ವಿಷಯ ಸ್ವಲ್ಪ ಚರ್ಚಾಸ್ಪದವಾದ ವಿಷಯ. ಅವರು ಇಷ್ಟೇ ಅವಧಿಯಲ್ಲಿ ಪಡೆಯಬೇಕು ಎಂದು ನಿರ್ಬಂಧಪಡಿಸಿ, ಅದಕ್ಕೆ ಒಂದು ರಿಸರ್ವ್ ಫಂಡ್, ಒಂದು ಸೆಪರೇಟ್ ಹೆಡ್ ಇರುವ ಹಾಗೆ ಏರ್ಪಾಡು ಮಾಡಬೇಕು. ಅದು ನಿಗದಿಯಾದ ಕಾಲದಲ್ಲಿ ಪ್ರತಿಯೊಬ್ಬ ಇನಾಂದಾರನಿಗೂ ತಲುಪುವಂತೆ ಮಾಡಬೇಕು. ಆಗ ಸರ್ಕಾರದ ಸಾಲವೂ ಸಹ ಕಡಮೆಯಾಗಬಹುದು. ಒಂದು ಸೆಪರೇಟ್ ಹೆಡ್ ಇಲ್ಲದಿದ್ದರೆ ಕಷ್ಟವಾಗುತ್ತದೆ. ಈ ಇನಾಂ ಅಬಾಲಿಷ್ ಆಕ್ಟ್ ಬಂದಲಾಗಾಯಿತು ಎಷ್ಟು ಜನಕ್ಕೆ ಕಾಂಪೆನ್ಸೇಷನ್ ಕೊಟ್ಟಿದ್ದೀರಿ ಎಂಬುದನ್ನು ತಾವು ಹೇಳಬೇಕು. ಈ ವಿಚಾರದಲ್ಲಿ ನಣ್ಣಪುಟ್ಟ ಇನಾಂದಾರರಿಗೆ ಸರ್ಕಾರದಿಂದ ಬಹಳ ಕಿರುಕುಳವಾಗುತ್ತದೆ. ನಣ್ಣಪುಟ್ಟ ಇನಾಂದಾರರು ಇನ್‌ಸ್ಟಾಲ್‌ಮೆಂಟನ್ನು ತೆಗೆದುಕೊಳ್ಳಬೇಕೆಂದು ಹೇಳಿದರೆ, ಆಫೀಸುಗಳಲ್ಲಿ ಕಿರುಕುಳ ಜಾಸ್ತಿ. ಕಾಂಪೆನ್ಸೇಷನ್ ಅರ್ಧಭಾಗ ಆಫೀಸರುಗಳಿಗೆ ಹೊರಟು ಹೋಗುತ್ತದೆ. ಈ ಅಡಳಿತಕ್ಕೋಸ್ಕರ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಎಷ್ಟಾಗುತ್ತದೆ! ಈ ಕಾಂಪೆನ್ಸೇಷನ್ ಕೊಡುವುದರಲ್ಲಿಯೇ ಸರ್ಕಾರದ ಬಡ್ಜೆಟ್ ಬರಿದಾಗುತ್ತದೆ. ಒಂದು ನಿರ್ದಿಷ್ಟವಾದ ಕಾಲದಲ್ಲಿ, ಕಾನೂನು ಬದ್ಧವಾಗಿ ಅದು ತೀರ್ಮಾನವಾಗುವಂಥ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳಬೇಕು. ಸರ್ಕಾರ ಇದನ್ನು ಮಾಡುವಾಗ, ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಮಾಡಬೇಕು. ಪ್ರಾವಿಷನ್ ಆದ ಹಣ ಪೂರ್ತಿಯಾಗಿ ಖರ್ಚಾಗಬೇಕು. ಹಾಗೆ ಒಂದು ಏರ್ಪಾಡನ್ನು ಮಾಡಬೆಕೆಂದು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ.

ಸರ್ವೆ ಸೆಟಲ್‌ಮೆಂಟ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಒಂದು ಗ್ರಾಮದ ಕೆಲಸ ಪೂರ್ತಿಯಾದಮೇಲೆ ಇನ್ನೊಂದು ಗ್ರಾಮಕ್ಕೆ ಹೋಗಬೇಕು. ಒಂದು ತಾಲ್ಲೂಕು ಕೆಲಸ ಪೂರ್ತಿಯಾಗುವವರೆಗೆ ಸರ್ವೆಯರುಗಳು ಮುಂದೆ ಹೋಗಬಾರದು. ಒಂದು ತಾಲ್ಲೂಕಿನ ಒಂದುಕಡೆ ಎರಡು ಗ್ರಾಮಗಳು, ಇನ್ನೊಂದು ತಾಲ್ಲೂಕಿನ ಒಂದುಕಡೆ ಎರಡು ಗ್ರಾಮಗಳು--ಈ ಪ್ರಕಾರ ಕೆಲಸ ತೆಗೆದುಕೊಳ್ಳಬಾರದು. ನೀವು ಆ ಕೆಲಸಕ್ಕೆ ಹಾಕುವ ಅಮಲ್ದಾರರುಗಳೇ ಟಿ. ಬಿ. ಕಂಪ್ಲೇಂಟ್ ಇರುವವರು ಅಥವಾ ಕಂಡೆಮ್ಡ್ ಹಾರ್ಸ್‌ಸ್, ಇಂಥವರನ್ನು ಅಲ್ಲಿಗೆ ಹಾಕಿಬಿಟ್ಟಿದ್ದೀರಿ. ಅಂಥವರು ಎಷ್ಟರಮಟ್ಟಿಗೆ ತಿರುಗಾಮುವುದಕ್ಕಾಗುತ್ತದೆ? ಅವರುಗಳಿಗೆ ಹೋದ

(ಶ್ರೀ ಯು ಎಂ. ಮಾದಪ್ಪ)

ಕಡೆ ಸರಿಯಾದ ಆಹಾರ ಸಿಕ್ಕಬೇಕು. ಆದರೆ ಹಳ್ಳಿಗಳಲ್ಲಿ ಅವರಿಗೆ ಸರಿಯಾದ ಆಹಾರ ಸಿಕ್ಕುವುದಿಲ್ಲ.

ಈ ಪ್ರಶ್ನೆ ಜಾಗ್ರತೆ ಇತ್ಯರ್ಥವಾಗಬೇಕಾದರೆ ಅದಕ್ಕೆ ತಕ್ಕ machinery ಅಥವಾ ಯಂತ್ರವನ್ನು ಸುಧಾರಣೆಮಾಡಬೇಕು, ಅಲ್ಲಿ ಕೆಲವು ಅವ್ಯವಸ್ಥೆಗಳಿವೆ, ಅವನ್ನು ಸರಿಪಡಿಸ ಬೇಕು ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕಾಗಿದೆ. ಇನಾಮ್ ರದ್ದಿಯಾತಿ ಕಾನೂನುಗಳನ್ನು ಒಂದರ ಮೇಲೊಂದು ರಾಷ್ಟ್ರದ ಹಿತದೃಷ್ಟಿಯಿಂದ ತರುವಾಗ, ಇವನ್ನು ಕಾರ್ಯಗತ ಮಾಡುವಾಗ ದೇಶ ಭಕ್ತಿಯಿಂದಲೂ ರಾಷ್ಟ್ರದ ಹಿತದೃಷ್ಟಿಯಿಂದಲೂ ಕೆಲಸಮಾಡಬೇಕೆಂದು ನೂಚಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಸ್ವಾಮಿ, ಈಗ ತಂದಿರತಕ್ಕ ಇನಾಮ್ ರದ್ದಿಯಾತಿ ಮಸೂದೆಯನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದರೂ ಕೂಡ ಇಡೀ ದೇಶದವರ ಹೊಟ್ಟೆಗಾಗಿ ದವನ ಧಾನ್ಯಗಳನ್ನು ಬೆಳೆಯತಕ್ಕ ರೈತನ ಹಿತಚಿಂತನೆಯನ್ನು ಇದುವರೆಗೂ ಸಾಧನೆ ಮಾಡದೇ ಇರುವುದು ತುಂಬ ವಿಷಾದಕರವಾದ ಸಂಗತಿ. ಇದು ಕೇವಲ ರೈತನಿಗೆ ಸಂಬಂಧಪಟ್ಟ ಸಮಸ್ಯೆ. ದೇಶದಲ್ಲಿರುವ ಆಹಾರ ಕೊರತೆಯ ವಿಚಾರವಾಗಿ ಆಗಲೇ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಇನಾಮ್ ಜಮೀನಿನ ಪ್ರಶ್ನೆಯೂ ಕೂಡ ಆಹಾರದ ಉತ್ಪಾದನೆಯನ್ನು ಅವಲಂಬಿಸಿರುವುದರಿಂದ ವ್ಯವಸಾಯಗಾರನ ಅಥವ ರೈತನ ಪ್ರಗತಿಯನ್ನು ಕುಂಠಿತ ಮಾಡತಕ್ಕ ಪ್ರಶ್ನೆ. ಹಾಗೂ ದೇಶದಲ್ಲಿ ಅನೇಕ ಜನರು ಇನಾಮ್ ಜಮೀನನ್ನಿಟ್ಟುಕೊಂಡು ಅನೇಕ ರೈತರನ್ನು ತಮ್ಮ ಸ್ವಾಧೀನದಲ್ಲಟ್ಟುಕೊಂಡು ಕೆಲಸ ಮಾಡುತ್ತಿರುವುದು ತಮಗೆ ಗೊತ್ತಿದೆ, ಹೀಗಾಗುತ್ತಿರುವ ನೀತಿ ಸರಿಯಿಲ್ಲವೆಂದು ಸರ್ಕಾರ ಈಗಾಗಲೇ ಒಂದು ಕಾನೂನನ್ನು ತಂದಿದ್ದಾರೆ. ಇದುವರೆಗೂ ಅದರಿಂದ ನಿಜವಾಗಿ ರೈತನಿಗೆ ಸಾಕಷ್ಟು ಸಹಾಯ ದೊರೆಯದೇಯಿರುವುದು ವಿಷಾದಕರ. ಈಗಲಾದರೂ ಅದನ್ನು ಅತಿ ಜಾಗ್ರತೆ ಕಾರ್ಯರೂಪಕ್ಕೆ ತಂದು ದೇಶದ ಜನರ ಹೊಟ್ಟೆ ತುಂಬಲು ಪ್ರಯತ್ನಪಡುವ ರೈತರ ಅಶೋತ್ತರ ಈಡೇರಲೆಂದು ಅಪೇಕ್ಷೆಪಡುತ್ತೇನೆ. ಜೋಡಿ ಅಥವ ಇನಾಂ ಜಮೀನು ವ್ಯವಸಾಯ ಮಾಡತಕ್ಕ ರೈತನಿಗೆ ಎಷ್ಟೋ ತೊಂದರೆಗಳೂ ಕಿರುಕುಳಗಳೂ ಇವೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಾಗುಮಾಡುವ ರೈತನಿಗೆ ಸರ್ಕಾರದಿಂದ ದೊರೆಯುತಕ್ಕ ಸಹಾಯ ಸೌಲಭ್ಯಗಳು ಯಾವ ರೀತಿಯಿಂದಲೂ ಅವನಿಗೆ ದೊರಕುತ್ತಿಲ್ಲ. ಇನಾಂ ಗ್ರಾಮಗಳ ರೈತರು ದೇಶದಲ್ಲಿ ಸರ್ಕಾರ ಎದೆಯೋ ಇಲ್ಲವೋ ಎಂಬ ಅರಿವೂ ಇಲ್ಲದೆ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇನಾಂ ಗ್ರಾಮದಲ್ಲಿ ಒಂದು ಕೆರೆ, ಒಂದು ರಸ್ತೆ ಅಥವಾ ಒಂದು ಸ್ಕೂಲು ಇಂಥಾದ್ದೇನಾದರೂ ಅಪೇಕ್ಷೆ ಮಾಡಿ ಕೇಳಿದರೆ, ಅದು ಜೋಡಿ ಗ್ರಾಮ, ಸರ್ಕಾರಿ ಗ್ರಾಮವಲ್ಲ, ಆದುದರಿಂದ ಆ ಸೌಲಭ್ಯ ದೊರೆಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಸ್ವಾತಂತ್ರ್ಯಕ್ಕಾಗಿ ಹೊಡೆದಾಡಿರುವ ಈ ರೈತರಿಗೆ ಹತ್ತು ವರ್ಷಗಳಾದರೂ ಇನ್ನೂ ಸ್ವಾಂತತ್ರ್ಯ ದೊರಕಿಲ್ಲವೆಂದು ಹೇಳಿದರೆ, ಇದು ವಿಷಾದಕರ. ಈ ಪರಿಸ್ಥಿತಿ ಇನ್ನೂ ಮುಂದುವರಿಯದೇಯಿರುವ ಹಾಗೆ ನೋಡಬೇಕು. ಪ್ರತಿಯೊಬ್ಬರೂ ಸರ್ಕಾರದ ಪ್ರಜೆಗಳೆಂದು ಪರಿಗಣಿಸಿ, ಸರ್ಕಾರದಿಂದ ಕೊಡುವ ಸವಲತ್ತುಗಳು ನೇರವಾಗಿ ಪ್ರತಿಯೊಬ್ಬರಿಗೂ ದೊರೆಯುತಕ್ಕು. ಈಗಾಗಲೇ ದೇಶದ ಬೆನ್ನುಮೂಳೆಯೆಂದು ಹೇಳಿಸಿಕೊಳ್ಳುವ ರೈತ, ನಿಜವಾಗಿ ತಾನು ಬೆನ್ನುಮೂಳೆ ಎಂದು ತಿಳಿದು ಶ್ರಮಪಡುವುದಕ್ಕೆ ಮುಂದೆ ಬರುತ್ತಾನೆ. ಆ ಪರಿಸ್ಥಿತಿ ಬರುವವರೆಗೂ ನಾವು ಎಷ್ಟೇ ರೈತನ ಹಿತಚಿಂತನೆ ಮಾಡುತ್ತೇವೆಂದು ಹೊರಟರೂ ಅವನಿಗಾಗತಕ್ಕ ತೊಂದರೆ ಆಗುತ್ತಲೇ ಇರುತ್ತದೆ. ಆದುದರಿಂದ ಈ ಮಸೂದೆಯನ್ನು ಅತಿ ಜಾಗ್ರತೆ ಕಾರ್ಯರೂಪಕ್ಕೆ ತಂದು ಈ ಶ್ರಮ ಜೀವಿಯನ್ನು ರಕ್ಷಣೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನಾಂ ರದ್ದಿಯಾತಿ ಸಂಬಂಧದಲ್ಲಿ ಗೇಣಿದಾರರಿಗೆ ಅನೇಕ ತೊಡಕುಗಳಾಗುತ್ತಿರುವುದು ನಮಗೆ ಕಂಡು ಬರುತ್ತಿದೆ. ಈಗಾಗಲೇ ಇನಾಂ ಗ್ರಾಮದಲ್ಲಿ ಸಾಗು ಮಾಡುವವರನ್ನು ಖದೀಮ್ ಟೆನೆಂಟ್, ಕ್ವಾಸಿ ಪರ್ಮನೆಂಟ್ ಟೆನೆಂಟ್ ಮತ್ತು ಪರ್ಮನೆಂಟ್ ಟೆನೆಂಟ್ ಎಂದು ಮೂರು ನಾಲ್ಕು ನಮೂನೆಯಾದ ಟೆನೆಂಟ್‌ಗಳೆಂದು ವಿಂಗಡಿಸಿದ್ದಾರೆ. ಆದರೆ ಅನೇಕ ಹಳ್ಳಿಗಳಲ್ಲಿ ಇನಾಮ್ ಭೂಮಿಯನ್ನು ಸಾಗುಮಾಡತಕ್ಕ ಸಾಗುವಳಿದಾರರು ನಿರ್ದಿಷ್ಟವಾಗಿ ಯಾವ ಒಂದು ಕರಾರೂ ಅಥವಾ ಕ್ರಮಬದ್ಧವಾದ ಲಿಖಿತಮೂಲಕವಾದ ಕರಾರನ್ನೂ ಮಾಡಿಕೊಂಡಿರುವುದಿಲ್ಲ ಮತ್ತು ಅನೇಕ ಗೇಣಿದಾರರು ಜಮೀನ್ದಾರರ ಮೂಲಕ ರಶೀದಿಯನ್ನು ಪಡೆಯುವ ಪದ್ಧತಿಯೇ ಹಳ್ಳಿಗಳಲ್ಲಲ್ಲ, ಇದು ಮಾಮೂಲಾಗಿ ನಡೆದು ಬಂದಿರುವ ಪದ್ಧತಿ. ಈಗ ಇನಾಮ್ ರದ್ದಿಯಾತಿ ಕಾಲದಲ್ಲಿ ಅವರು ತಾವು ಖಾಯಂ ಸಾಗುವಳಿದಾರರು ಎಂದು ನಿರ್ದಿಷ್ಟಪಡಿಸಬೇಕಾದರೆ, ಮಧ್ಯೆ ಅನೇಕ ತೊಡಕುಗಳು ಬಂದು ಅದರಿಂದ ಮಧ್ಯಸ್ಥಗಾರನಿಗೆ ಸಹಾಯವಾಗುವ ಸಂದರ್ಭ ಬರಬಾರದು. ಸುಲಲಿತವಾಗಿ ಬಹುಕಾಲದಿಂದ ಒಂದು ಜಮೀನಿನಲ್ಲಿ ದುಡಿಮೆ ಮಾಡುವವನು ಯಾರೋ ಅಂಥವನಿಗೆ ಸರಿಯಾದ ಅನುಕೂಲತೆ ದೊರೆಯುವ ಅವಕಾಶವನ್ನು ಇದರಲ್ಲಿ ಅಳವಡಿಸಬೇಕೆಂದು ತಮ್ಮಲ್ಲಿ ಅರಿಕೆಮಾಡುತ್ತೇನೆ.

ಇನಾಮ್ ರದ್ದಿಯಾತಿ ಕಾಲದಲ್ಲಿ ಕೊಡಬಹುದಾದ ಪರಿಹಾರದ ವಿಷಯ ವಿಚಾರವನ್ನು ತಾವು ಯೋಚನೆ ಮಾಡಬೇಕು. ಇನಾಮ್ ಜಮೀನಿನಲ್ಲಿ ಎಷ್ಟೋ ವರ್ಷಗಳಿಂದ ಇನಾಮ್‌ದಾರನು ಪ್ರಯೋಜನ ಹೊಂದಿರುತ್ತಾನೆ. ಎಷ್ಟೋ ಹಣವನ್ನು ಸಂಪಾದನೆ ಮಾಡಿರುತ್ತಾನೆ. ಈಗ ಅವನಿಗೆ ಯಾವ ರೀತಿ ಪರಿಹಾರ ಕೊಡಬೇಕೆಂಬುದನ್ನು ಕೂಡ ಗಮನದಲ್ಲಟ್ಟುಕೊಂಡು ಪರಿಹಾರ ಕೊಡುವಂತೆ ಮಾಡಬೇಕೆಂದು ನೂಚಿಸುತ್ತೇನೆ.

ಮುಖ್ಯವಾಗಿ, ನಮ್ಮ ದೇಶದಲ್ಲಿ ಇನಾಮ್‌ದಾರರ ಜಮೀನನ್ನು ಮಾಡುವ ರೈತರನ್ನು ನಿರಾಶ್ರಿತರಾಗಿ ಮಾಡಿ ಬೇರೆ ಪ್ರದೇಶಕ್ಕೆ ಹೋಗಲು ಅವಕಾಶ ಕೊಡದೆ ಪ್ರತಿಯೊಬ್ಬ ರೈತನಿಗೂ ಆ ಜಮೀನಿನ ಉಪಯೋಗ ದೊರಕತಕ್ಕ ಅವಕಾಶವನ್ನು ಕಲ್ಪಿಸಬೇಕು, ಈ ರೀತಿ ಜಾಗ್ರತೆ ರೈತನ ಹಿತದೃಷ್ಟಿಯಿಂದ ಇನಾಮ್ ರದ್ದಿಯಾತಿಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ ಇನ್ನು ಹೆಚ್ಚು ಮಾತನಾಡುವುದಿಲ್ಲ; ನನಗೆ ಆರೋಗ್ಯ ಸರಿಯಾಗಿಲ್ಲವಾದುದರಿಂದ ಈ ಕೆಲವೇ ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎ. ಆರ್. ಪಂಚಗವಿ (ಗೋಕಾಕ್-II).— ಅಧ್ಯಕ್ಷರೇ, ಈ ಮೈಸೂರು ಪರ್ಮನೆಂಟ್ ಮತ್ತು ಮಿಸೆಲೇನಿಯಸ್ ಇನಾಂ ಅಬಾಲಿಷನ್ ಕಾಯಿದೆ ತಿದ್ದುಪಡಿಯನ್ನು ನಾನು ಅತ್ಯಂತ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

ಇನಾಂದಾರರ ಸ್ವಭಾವ ಅಥವಾ ಜೋಡಿದಾರರ ಸ್ವಭಾವ ಎಲ್ಲಾ ಕಡೆಯೂ ಒಂದೇ ರೀತಿಯಾಗಿದ್ದರೆ, ರೈತರ ಕಷ್ಟಗಳೂ ಒಂದೇ ತರಹದಲ್ಲಿ ಇವೆ. ಹಳೆಯ ಮೈಸೂರಿನಲ್ಲಿ ಪರ್ಮನೆಂಟ್ ಮತ್ತು ಇನಾಂ ಅಬಾಲಿಷನ್ ಆಕ್ಟ್ ಇದ್ದರೂ ಕೂಡ, ಇನಾಮುಗಳು ಉಳಿದಿವೆ. ಅಲ್ಲಿ ಹಳ್ಳಿಗಳ ಅನುಭವ ನಮಗೆ ಸಂಪೂರ್ಣವಿದೆ. ಹಳೆಯ ಮೈಸೂರಿನ ರೈತರು ಅನುಭವಿಸುತ್ತಿರುವ ಕಷ್ಟಗಳು ಎಲ್ಲರಿಗೂ ಗೊತ್ತಿರುವ ವಿಷಯ. ಅವರಿಗೆ ಆಗಿರುವ ಅನ್ಯಾಯವನ್ನು ಕೊನೆಗೊಳಿಸುವುದಕ್ಕೆ ಸರ್ಕಾರದವರು ಬಹಳ ಕಾಲದಿಂದ ಪ್ರಯತ್ನ ನಡೆಸುತ್ತಿದ್ದಾರೆ. ಇನಾಂ ಅಬಾಲಿಷನ್ ಆಕ್ಟಿನಲ್ಲಿ ಕೆಲವು ತೊಂದರೆಗಳು ತಲೆದೋರಿದುವು. ಆ ತೊಂದರೆಗಳನ್ನು ನಿವಾರಿಸಲು ಈ ಬಿಲ್ಲನ್ನು ತಂದಿದೆ. ಸರ್ವೆ ಸೆಟಲ್‌ಮೆಂಟ್ ಆಗದಿರುವ ಇನಾಂ ಹಳ್ಳಿಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ತಿಳಿದು, ಈ ಬಗ್ಗೆ ಈ ತಿದ್ದುಪಡಿ ವಸೂದೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಈ ಪರ್ಮನೆಂಟ್ ಟೆನೆಂಟ್‌ಗಳು, ಅಂದರೆ ಗೇಣೀದಾರರು, ಸಾಧಾರಣವಾಗಿ ಅನೇಕ ವರ್ಷಗಳಿಂದ, ಇನಾಂದಾರರು ಅವರ ಗ್ರಾಮಗಳಿಗೆ ಬರುವುದಕ್ಕೆ ಮುಂಚಿನಿಂದಲೂ ಕೂಡ ಆ ಜಮೀನುಗಳಲ್ಲಿ ಇದ್ದಂಥವರು. ಯಾರೋ ಅರಸರು ಇನಾಮು ಗ್ರಾಮಗಳನ್ನು ಅವರಿಗೆ ಕೊಟ್ಟ ಮೇಲೆ, ಧರ್ಮ ಕರ್ಮವನ್ನು ಎಣಿಸದೆ, ಎಲ್ಲ ಜಮೀನೂ ತಮ್ಮದೇ, ರೈತರಿಗೆ ಅದರಲ್ಲಿ ಹಕ್ಕಿಲ್ಲವೆಂದು ರೈತರನ್ನು ಜಮೀನಿನಿಂದ ಹೊರಗಡೆ ಹಾಕಿ ಅವರಿಗೆ ಅನ್ಯಾಯ ಮಾಡುತ್ತಾ ಬಂದರು. ಊರಿನೊಳಗಿರುವ ರಸ್ತೆಗಳ ಮೇಲೆಯೂ ಕೂಡ ತಮ್ಮ ಮಾಲಕತ್ವವಿದೆ, ಹಕ್ಕು ಇದೆಯೆಂದು ಸಾಧಿಸುತ್ತಾ ಬಂದರು. ಹೀಗಾಗಿ ಇನಾಂ ಗ್ರಾಮಗಳಲ್ಲಿರುವ ರೈತರಿಗೆ ಬಹಳ ಅನ್ಯಾಯಗಳು ಆಗುತ್ತಾ ಬಂದುವು. ರೈತರು ಮೊದಲಿನಿಂದ ಮಾಡುತ್ತಾ ಬಂದ ಜಮೀನಿನ ಮೇಲೆ, ತಮ್ಮ ಮಾಲಕತ್ವ ಇದೆ ಎಂದು ತಿಳಿದುಕೊಂಡ ಮೇಲೆ, ಅವರನ್ನು ಇನಾಂದಾರರು ಹೊರಗಡೆ ಹಾಕಿ, ಬಹಳ ಅನ್ಯಾಯಗಳನ್ನು ಮಾಡುತ್ತಾ ಬಂದರು. ಈ ಅನ್ಯಾಯಗಳು ಕೊನೆಗೊಳ್ಳಬೇಕಾದರೆ, ಈ ಇನಾಂ ರದ್ದಿಯಾತಿ ಶಾಸನ ಅತ್ಯವಶ್ಯಕವಾಗಿದೆ. ಈ ಇನಾಂಗಳು ರದ್ದಿಯಾತಿ ಆಗುವವರೆಗೆ, ಸರ್ಕಾರದವರು ಅವುಗಳನ್ನು ತೆಗೆದುಕೊಳ್ಳಬೇಕು. ವಂಶಪಾರಂಪರ್ಯವಾಗಿ ಬಹು ಕಾಲದಿಂದ ಅನುಭವಿಸಿಕೊಂಡು ಬಂದ ಅನೇಕ ಖಾಯಂ ರೈತರ ಹಕ್ಕನ್ನು ಆ ಜಮೀನಿನಿಂದ ತಪ್ಪಿಸುವುದಕ್ಕೆ, ಇನಾಂದಾರರು ಆ ಜಮೀನನ್ನು ಪಾಲು ಮಾಡಿಕೊಳ್ಳುವುದು ಅಥವಾ ಅದನ್ನು ಇನ್ನೊಬ್ಬರಿಗೆ ಮಾರಾಟ ಮಾಡುವುದು, ಇನ್ನೊಬ್ಬರಿಗೆ ಗೇಣಿಗೆ ಕೊಡುವುದು ಮುಂತಾದ ವಹಿವಾಟುಗಳನ್ನು ಮಾಡುತ್ತಾ ಬಂದರು. ಹಳೆಯ ಮೈಸೂರಿನಲ್ಲಿ ಯಾವ ರೀತಿ ಜೋಡಿದಾರರು ಅವರ ರೈತರುಗಳಿಗೆ ತೊಂದರೆ ಕೊಡುತ್ತಾ ಇದ್ದಾರೋ, ಅದೇ ತರಹದಲ್ಲಿ ಮುಂಬೈ ರಾಜ್ಯದಲ್ಲಿಯೂ ಕೂಡ ವಂಶಪಾರಂಪರ್ಯವಾಗಿ ಜಮೀನನ್ನು ಮಾಡಿಕೊಂಡಿದ್ದ ರೈತರಿಗೆ ಅವರ ಹಕ್ಕುಗಳನ್ನು ತಪ್ಪಿಸುವುದಕ್ಕೋಸ್ಕರ ಅನೇಕ ತೊಂದರೆಗಳನ್ನು ಕೊಡುತ್ತಾ ಬಂದರು. ಆದ್ದರಿಂದ ಅಲ್ಲಿ ಖಾಯಂ ರೈತರಿಗೆ ಅವರ ಹಕ್ಕಿಗೆ ಮನ್ನಣೆ ಸಿಕ್ಕಬೇಕೆಂದು ಸರ್ಕಾರದವರು ಕೆಲವು ಅಧಿನಿಯಮಗಳನ್ನು ಮಾಡಿದ್ದಾರೆ. ಮೈಸೂರಿನಲ್ಲಿಯೂ ಅದೇ ರೀತಿಯ ಒಂದು ಹೆಜ್ಜೆಯನ್ನು ತೆಗೆದುಕೊಂಡಿರುವುದು ಸ್ತುತ್ಯ. ರೈತರಿಗೆ ಮೊದಲಿನಿಂದ ಏನು ಒಂದು ಮಾಲೀಕತ್ವ, ಒಡೆತನ ಜಮೀನಿನ ಮೇಲೆ ಬಂಬಿದೆಯೋ, ಅದನ್ನು ಅವರಿಗೇ ಕೊಡಬೇಕು; ಜೋಡೀದಾರರಿಗೆ ಅದನ್ನು ಕೊಡಬಾರದು. ಅಂಥವರಿಗೆ ಖಾಯಂ ಸೆಕ್ಷನಿನಲ್ಲಿ:

> "Provided that where a permanent tenant entitled to be registered as an occupant of land...is shown as a registered occupant in the settlement register and other records...of the Land Revenue Code."

ಎಂದು ಹೇಳಿರುವುದು ಸಹಾಯಕವಾಗಿದೆ. ರೈತನಿಗೆ ರಿಜಿಸ್ಟರ್ಡ್ ಆಕ್ಯುಪೆಂಟ್ ಆಗುವ ಪೂರ್ಣ ಹಕ್ಕನ್ನು ಏನು ಕೂಡಬೇಕೆಂದಿದ್ದೀರೋ, ಆ ಹೆಜ್ಜೆ ಅತ್ಯಂತ ಸ್ತುತ್ಯವಾದುದು. ರೈತರ ಹಕ್ಕನ್ನು ಎತ್ತಿ ಹಿಡಿಯಬೇಕೆಂಬ ತತ್ವಕ್ಕೆ ಮಾನ್ಯತೆ ಮಾಡಿದ್ದು ಅತ್ಯಂತ ಮಹತ್ವಪೂರ್ಣ ವಿಷಯ. ರೈತರ ಮೇಲೆ ಏನು ಅನ್ಯಾಯವಾಗುತ್ತಾ ಬಂದಿದೆಯೋ, ಇವರ ಬಗ್ಗೆ ಸರ್ಕಾರದವರು ಒಂದು ಪರಿಹಾರ ಕೊಡುವುದನ್ನು ಅಂಗೀಕಾರ ಮಾಡಿದ್ದಾರೆ. ಈ ಬಿಲ್ಲನ್ನು ಅತ್ಯಂತ ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ರೈತರಿಗೆ ಆಗುವ ತೊಂದರೆಗಳನ್ನು ಆದಷ್ಟು ತೀವ್ರವಾಗಿ ನಿವಾರಣೆ ಮಾಡಬೇಕು. ಇನಾಂ ಹಳ್ಳಿಗಳನ್ನು ತಾವೇ ತೆಗೆದುಕೊಂಡು, ಮುಂದಿನ ಕೆಲಸವನ್ನು ನಡೆಸುವ ಬಗ್ಗೆ ಸರ್ಕಾರದವರು ಯೋಚನೆ ಮಾಡಿದ್ದಾರೆ. ಇದು ಬಹಳ ಸ್ತುತ್ಯವಾದುದು. ಅನೇಕ ರಾಜ ಮಹಾರಾಜರುಗಳ ಕಾಲದಿಂದ ಇನಾಂದಾರರಿಂದಾಗಲಿ ಅಥವಾ ಇತರ ಪೆಸ್ಕೆಡ್ ಇಂಟರೆಸ್ಟ್‌ಗಳಿಂದಾಗಲಿ ರೈತರ ಮೇಲೆ ನಡೆಯುತ್ತಿರುವ ಅನೇಕ ತರಹ ಅನ್ಯಾಯಗಳನ್ನು ಈಗಲಾದರೂ ಕೊನೆಗಾಣಿಸುವುದಕ್ಕೆ ಸರ್ಕಾರದವರು ಯೋಗ್ಯ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳುತ್ತಾರೆಂದು ಆಶಪಡಿ, ಈ ಬಿಲ್ಲನ್ನು ಸ್ವಾಗತಿಸಿ, ನನ್ನ ಭಾಷಣವನ್ನು ನುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಇನಾಂಗ್ರಾಮಗಳಲ್ಲಿರತಕ್ಕ ರೈತರ ವಿಚಾರದಲ್ಲಿ ಎಷ್ಟು ಕಳಕಳಿಯಿಂದ ಮಾತನಾಡಿದರೋ, ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಇನಾಂ ರೈತರಿಗೆ ಇನಾಂದಾರರಿಂದ ಆಗತಕ್ಕ ಕಿರುಕುಳಗಳನ್ನು ಮಾನ್ಯ ಸದಸ್ಯರೇ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಅವರಿಗೆ ಕಿರುಕುಳಗಳು ಆಗುತ್ತಿರುವುದೂ ನಿಜ. ಅಲ್ಲಲ್ಲ ಇನಾಂದಾರರು ಕಾನೂನಿಗೆ ವಿರುದ್ಧವಾಗಿ, ಅಕ್ರಮವಾಗಿ ರೈತರನ್ನು ಜಮೀನಿನಿಂದ ಒಡಿಸುತ್ತಾ ಇರುವುದೂ ನಿಜ. ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಅಧಿಕಾರಿಗಳು ರೈತರ ವಿಚಾರದಲ್ಲಿ ಸಾಕಾದಷ್ಟು ಸಹಾನುಭೂತಿ ಇಲ್ಲದೆ ವರ್ತಿಸಿರುವುದೂ ನಿಜ.

[MR. SPEAKER in the Chair.]

ಅಧಿಕಾರಿಗಳಲ್ಲಿ ಒಳ್ಳೆಯವರೂ ಇದ್ದಾರೆ; ಕೆಟ್ಟವರೂ ಇದ್ದಾರೆ; ತಿಳಿವಳಿಕೆ ಇಲ್ಲದವರೂ ಇದ್ದಾರೆ. ಆದ್ದರಿಂದ ಸ್ಥಳೀಯ ಅಧಿಕಾರಿಗಳು ಒಮ್ಮೊಮ್ಮೆ ಅಪ್ಪಿತಪ್ಪಿ ಸಹಾನುಭೂತಿ ಇಲ್ಲದೆ ವರ್ತಿಸಿರುವುದನ್ನು ಪ್ರಕಟಿಸಿದರೆ, ಅದು ಸಾರೋದ್ಧಾರವಾಗಿ ಎಲ್ಲ ಅಧಿಕಾರಿಗಳೂ ಅದೇ ರೀತಿಯಾಗಿ ವರ್ತಿಸಿದ್ದಾರೆಂದು

(ಶ್ರೀ ಕಡಿದಾಳ್ ಮಂಜಪ್ಪ)

ಹೇಳಿ ಅರ್ಥ ಮಾಡುವುದು ತಪ್ಪಾಗುತ್ತದೆ. ಮಾನ್ಯ ಸದಸ್ಯರಿಗೆ ಮತ್ತು ಸರ್ಕಾರಕ್ಕೆ ರೈತರಲ್ಲಿ ಎಷ್ಟು ಅನಕ್ಕೆ, ಇದೆಯೋ ಅಷ್ಟೇ ಅನಕ್ಕೆ ಕೆಲವು ಅಧಿಕಾರಿಗಳಿಗೂ ಇದೆ ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕು.

ಮಾನ್ಯ ಸದಸ್ಯರಾದ ಶ್ರೀ ವೆಂಕಟೇಗೌಡರು ಈ ಮಸೂದೆಗೆ ಫೈನಾನ್ಷಿಯಲ್ ಮೆಮೊರಾಂಡಂ ಸೇರಿಸಬೇಕಾಗಿದ್ದಿತು, ಏಕೆಂದರೆ ಬಡ್ಡಿ ಕೊಡುತ್ತಾ ಇದ್ದೀರಿ ಮತ್ತು ಖಾಯಂ ಗೇಣಿದಾರರಿಗೆ ಅಪ್‌ಸೆಟ್ ಪ್ರೈಸ್ ಕೊಡುವುದನ್ನು ವಿನಾಯಿತಿ ಮಾಡುತ್ತಾ ಇದ್ದೀರಿ ಎಂದು ಹೇಳಿದರು. ಈಗ ಇರತಕ್ಕ ಕಾನೂನಿನಲ್ಲಿ ಖದೀಂ ರೈತರು ಅಪ್‌ಸೆಟ್ ಪ್ರೈಸ್ ಕೊಡಬೇಕಾಗಿಲ್ಲ.

11-30 A.M.

ಕೆಲವು ಖದೀಂ ಗೇಣಿದಾರರನ್ನು ಅಂದರೆ ಪರ್ಮನೆಂಟ್ ಟೆನೆಂಟ್ಸ್‌ನ್ನು ಅವರು ವಾಸ್ತವಿಕವಾಗಿ ಖದೀಂ ರೈತರಾಗಿದ್ದಾಗ್ಗೂ ಕೂಡ ಬರೀ ಪರ್ಮನೆಂಟ್ ಟೆನೆಂಟ್ಸ್ ಎಂದು ರಿಕಾರ್ಡುಗಳಲ್ಲಿ ನಮೂದು ಮಾಡಿದ್ದಾರೆ. ಅವರಿಗೆ ಹೊಸ ಹಕ್ಕು ಬಾಧ್ಯತೆಗಳನ್ನು ನಾವು ಈ ಮಸೂದೆ ಮೂಲಕ ಕೊಡುತ್ತಿಲ್ಲ. ಅವರು ನ್ಯಾಯವಾಗಿ ಖದೀಂ ರೈತರೇ ಆಗಿದ್ದಾರೆ. ಆದರೆ ರಿಕಾರ್ಡುಗಳಲ್ಲಿ ಈಗ ಅವರನ್ನು ಪರ್ಮನೆಂಟ್ ಟೆನೆಂಟ್ಸ್ ಎಂದು ನಮೂದಿಸಿದ್ದಾರೆ. ಈ ಕಾರಣದಿಂದ ಅವರು ಖದೀಂ ರೈತರೇ ಆಗುತ್ತಾರೆ, ಪರ್ಮನೆಂಟ್ ಟೆನೆಂಟ್ಸ್ ಆಗುವುದಿಲ್ಲ. ಅವರಿಗೆ ಹೊಸ ಹಕ್ಕು ಬರುವುದಿಲ್ಲ. ಆದ್ದರಿಂದ ಫೈನಾನ್ಷಿಯಲ್ ಮೆಮೊರಾಂಡಂ ಮಾಡಿಲ್ಲ. ಈಗಿರತಕ್ಕ ಕಾನೂನು ಪ್ರಕಾರವೇ ಉಳಿದಿರುವ ಕಾಂಪೆಟೆನ್ಷಿ ಮೊಬಲಗಿನ ಮೇಲೆ ಬಡ್ಡಿಯನ್ನು ಕೊಡಬೇಕೆಂದು ವಿಧಾಯಕವಾಗಿದೆ. ಈ ಮಸೂದೆಯಲ್ಲಿ ಅದನ್ನು ನಮೂದಿಸಿದ್ದೇವೆ. ಇದೂ ಕೂಡ ಸಂಸ್ಥಾನದಮೇಲೆ ಹೊಸ ಆರ್ಥಿಕ ಹೊರೆಯಾಗುವುದಿಲ್ಲ. ಈಗಿರುವ ಕಾನೂನು ಪ್ರಕಾರ ಆರ್ಥಿಕ ಹೊರೆ ಎಷ್ಟಿದೆಯೋ ಇನ್ನು ಮೇಲೆಯೂ ಅಷ್ಟೇ ಇರುತ್ತದೆ ಎಂದು ಅರಿಕೆಮಾಡಿಕೊಳ್ಳುತ್ತೇನೆ.

ಮಾನ್ಯ ಸದಸ್ಯರು ಜೋಡಿದಾರರಿಗೆ ಕಾಂಪೆನ್ಸೇಷನ್ ಏಕೆ ಕೊಡುತ್ತೀರಿ ಎಂದು ಪ್ರಶ್ನೆಮಾಡಿದರು. ಕಾನೂನಿನಲ್ಲಿ ವಿಧಾಯಕವಾಗಿರುವ ಪ್ರಕಾರ ಕೊಡಬೇಕಾಗುತ್ತದೆ. ಕಾಂಪೆನ್ಸೇಷನ್ ಕೊಡದೆ ಇನಾಂದಾರಿಗಳನ್ನು ವಶಪಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಮಾಕ್ ಪುಟ್ಟಣ್ಣನವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕಾನೂನುಪ್ರಕಾರ ಯಾವುದನ್ನು ಕಾರ್ಯರೂಪಕ್ಕೆ ತರಬಹುದೋ ಅದನ್ನು ತರುವುದಕ್ಕೆ ಪ್ರಯತ್ನಮಾಡುತ್ತೇವೆ.

ಜೋಡಿಗ್ರಾಮಗಳಲ್ಲಿ ಕೆರೆ ದುರಸ್ತು ಮಾಡುವುದಿಲ್ಲ, ಅದು ತಪ್ಪು ಎಂದು ತಿಳಿಸಿದ್ದಾರೆ. ಈಗಿರುವ ನಿಯಮದ ಪ್ರಕಾರ ಜೋಡಿ ಗ್ರಾಮಗಳಲ್ಲಿ ಕೂಡ ಸರ್ಕಾರ ಕೆರೆ ದುರಸ್ತು ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಹೊಸದಾಗಿ ನಿಯಮವೇನೂ ರಚಿಸಬೇಕಾಗಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಜೋಡಿ ಗ್ರಾಮಗಳವರಿಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು ಸಾಲ ಕೊಡುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಈ ಸೂಚನೆಯನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಕೊಳ್ಳುತ್ತಾರೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಕೆಲವರು ವಿಮರ್ಶರು ಮಾತನಾಡುವಾಗ ಈ ಇನಾಂ ರದ್ದಿಯಾತಿ ಕಾನೂನಿನಿಂದ ರೈತರಿಗೆ ಪರಿಹಾರ ವೇನೂ ದೊರಕಿಲ್ಲವೆಂದು ವಾದಿಸಿದರು. ಸಾಕಾದಷ್ಟು ರಕ್ಷಣೆ ದೊರೆತಿದೆ. ಇನಾಂದಾರರು ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ಇನಾಂ ಜಮೀನನ್ನು ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲ. ಮೈಸೂರು ಗೇಣೀದಾರರ ಕಾನೂನು ಪ್ರಕಾರ ಜಮೀನು ಕೃಷಿ ಮಾಡುತ್ತಿರುವ ಗೇಣಿದಾರರನ್ನು ಬಿಡಿಸುವುದಕ್ಕೆ ಅವಕಾಶವಿಲ್ಲ. ಇಷ್ಟು ಕಾನೂನು ರಕ್ಷಣೆಯಿದ್ದಾಗ್ಯೂ ಕೂಡ ಕೆಲವು ಸಂದರ್ಭಗಳಲ್ಲಿ ಪ್ರಭಾವಯುತರಾದ ಮತ್ತು ಬಲಶಾಲಿಗಳಾದ ಇನಾಂದಾರರು ಕಾನೂನಿಗೆ ವಿರುದ್ಧವಾಗಿ ರೈತರಿಗೆ ಕಿರುಕುಳ ಕೊಡುತ್ತಿರುವುದು ಗಮನಕ್ಕೆ ಬಂದಿದೆ. ಸರ್ಕಾರದವರು ಈ ವಿಚಾರದಲ್ಲಿ ಆಗಾಗಲೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ನೂಕ್ತ ಸೂಚನೆಗಳನ್ನು ಕೊಟ್ಟಿದ್ದಾರೆ. ಕಾನೂನು ಪ್ರಕಾರ ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ಸಾಮೂಹಿಕ ಜಮೀನು ಮಾರಾಟ ಮಾಡಿದರೆ ಸಿಂಧುವಲ್ಲ ಎಂದು ವಿಧಾಯಕವಾಗಿದೆ. ಒಂದು ವೇಳೆ ಕಾನೂನಿಗೆ ವಿರುದ್ಧವಾಗಿ ಜಮೀನುದಾರರು ಭೂಮಿಯನ್ನು ಮಾರಾಟ ಮಾಡಿದರೆ ಆ ಭೂಮಿಯಿರುವ ಗ್ರಾಮಗಳನ್ನು ಸರ್ಕಾರದವರು ವಶಪಡಿಸಿಕೊಂಡು ಯಾರು ಯಾರಿಗೆಷ್ಟು ಬಾಧ್ಯತೆ ಎಷ್ಟು ಮಟ್ಟಿಗಿದೆಯೆಂದು ನಿರ್ಧರಿಸುವಾಗ ಆ ಪರಭಾರೆ ಸಿಂಧುವಾಗಿದೆಯೆ, ಇಲ್ಲವೆ ಎಂದು ಪರಿಶೀಲನೆ ಮಾಡಿ ನಿರ್ಧಾರ ಮಾಡುತ್ತಾರೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಇದುವರೆಗೂ ಸರ್ಕಾರದವರು ತೆಗೆದುಕೊಳ್ಳದಿರುವ ಇನಾಂಗ್ರಾಮಗಳಲ್ಲಿ ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ಎಷ್ಟು ವ್ಯವಹಾರವಾಗಿದೆಯೆಂಬ ಸಮಾಚಾರ ತರಿಸಿ ನೋಡಲು ಸಾಧ್ಯವಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತರಿಸಿಕೊಳ್ಳುತ್ತೇವೆ. ಈಗ ಸದ್ಯಕ್ಕೆ ಅಂಕಿ ಅಂಶ ನಮ್ಮ ಹತ್ತಿರ ಇಲ್ಲ. ಎಷ್ಟು ಜಮೀನನ್ನು ಆ ರೀತಿ ಪರಭಾರೆ ಮಾಡಿದ್ದಾರೆಂದು ನಿರ್ಧಾರವಾಗಿ ಹೇಳಲಾರೆ.

ಶ್ರೀ ಡಿ. ದೇವರಾಜ ಅರಸ್.—ಅದು ರಿಜಿಸ್ಟರಾಗುವುದರಿಂದ ಯಾವ ಪ್ರಮಾಣದಲ್ಲಿ ಆ ರೀತಿಯಾಗುತ್ತಿದೆಯೆಂಬು ಹೇಳಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಾರಿ ರಿಜಿಸ್ಟರ್ ಮಾಡುವುದಿಲ್ಲ. ಸಾಧಾರಣವಾಗಿ ರಿಜಿಸ್ಟರ್ ಮುಖಾಂತರ ಪರಭಾರೆ ಮಾಡುತ್ತಾರೆ ಒಂದು ವೇಳೆ ರಿಜಿಸ್ಟರ್ ಮಾಡಿದರೂ ಕೂಡ ಇನಾಂ ಜಮೀನೆಂದು ತಕ್ಷಣ ಗೊತ್ತಾಗುವುದು ಕಷ್ಟ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಗಮನಿಸುತ್ತೇವೆ.

ಇದುವರೆಗೆ ಹಳೆಯ ಮೈಸೂರಿನಲ್ಲಿ 570 ಇನಾಂ ಗ್ರಾಮಗಳನ್ನು ವಶಪಡಿಸಿಕೊಂಡಿದ್ದಾರೆ, ಸರ್ಕಾರದ ಮುಂಜಾಗರೂಕ ಏಳುಲಕ್ಷ ರೂಪಾಯಿವರೆಗೆ ಪರಿಹಾರ ಇನಾಂದಾರರಿಗೆ ಕೊಟ್ಟಿದ್ದಾರೆ, ಇನ್ನುಳಿದ ಗ್ರಾಮಗಳನ್ನು ಅದಷ್ಟು ಜಾಗ್ರತೆ ಸರ್ಕಾರ ವಶಪಡಿಸಿಕೊಂಡು ರೈತರ ಮತ್ತು ಜೋಡಿದಾರರ ಹಕ್ಕು ಬಾಧ್ಯತೆ ನಿರ್ಧಾರ ಮಾಡುವುದಕ್ಕೆ ಏರ್ಪಾಡು ಮಾಡುತ್ತದೆ. ಇಷ್ಟು ಕೇಳಿ ಈ ಮಸೂದೆಗೆ ತಮ್ಮ ಬೆಂಬಲ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಜೋಡಿ ಗ್ರಾಮಗಳಲ್ಲಿ ಕೆರೆ ರಿಪೇರಿ ಮಾಡುವುದಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೇರಿ ಮಾಡುವು ದಕ್ಕೆ ನಿರ್ಬಂಧವೇನೂ ಇಲ್ಲ.

Sri H. M. CHANNABASAPPA(Minister for Public Works and Electricity).—Yesterday I made it very clear that orders have been issued that all tanks major and minor and also new tanks may be taken up for restoration and repair.

Sri C. J. MUCKANNAPPA.—Even in jodi villages ?

Sri H. M. CHANNABASAPPA.—Yes.

Mr. SPEAKER.—The question is:

"That the Mysore (Personal and Miscellaneous) Inams Abolition (Amendment) Bill, 1958 be taken into consideration".

The motion was adopted.

Mr. SPEAKER.—I will now put clauses. The question is:

"That clauses 1 to 6 both inclusive and the Title and the Preamble stand part of the Bill."

The motion was adopted.

"Clauses 1 to 6 both inclusive and the Title and the Preamble were added to the Bill".

Motion to pass

Sri Kadidal MANJAPPA.—Sir, I beg to move:

"That the Mysore (Personal and Miscellaneous) Inams Abolition (Amendment)Bill, 1958 be passed".

Mr. SPEAKER.—The question is:

"that the Mysore (Personal and Miscellaneous) Inams Abolition (Amendment)Bill, 1958 be passed".

The motion was adopted.

MYSORE LAND REFORMS BILL. 1958.

Introduction

Sri Kadidal MANJAPPA (Minister for Revenue).—Sir, with your leave, I beg to introduce the Mysore Land Reforms Bill, 1958.

Mr. SPEAKER.—The Mysore Land Reforms Bill is introduced.

Copies will be made available to members. They will be sent to the members in the course of the day.

The House adjourns and will meet on Monday at 1 P.M.

The House adjourned at Forty Minutes past Eleven of the Clock to meet again at One of the Clock on Monday, the 1st December 1958.

WD 2269—GPR—900—10-3-59.